ಅನು 2

ಜೈನಧರ್ಮ ಪಠ್ಯ ಗ್ರಂಥಮಾಲೆ – 4

ರತ್ನಕರಂಡ-ಶ್ರಾವಕಾಚಾರ

(ಮೂಲ ಮತ್ತು ತಾತ್ಪರ್ಯ)

3

ಸಂಪಾದಕರು :

ಜಿ. ಅಶ್ವತ್ಥನಾರಾಯಣ, ಎಂ.ಎ.,

(ಕನ್ನಡ ಅಧ್ಯಾಪಕ, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು)

ಕಾ. ಪ. ವೃಷಭರಾಜು, ಬಿ.ಎಸ್ಸಿ.,ಬಿ.ಇಡಿ.,

(ಕಾರ್ಯದರ್ಶಿ, ಮಹಾವೀರ ಮಿಶನ್, ಬೆಂಗಳೂರು.)

ಶ್ರೀ ಮಹಾವೀರ ಮಿಶನ್ (ರಿ)

ಶಂಕರಪುರ ಬೆಂಗಳೂರು

1976 ನೇ

ಬೆಲೆ : 75 ಪೈಸೇ

ಜೈನಧರ್ಮ ಪಠ್ಯ ಗ್ರಂಥಮಾಲೆ – 4

ರತ್ನಕರಂಡ-ಶ್ರಾವಕಾಚಾರ

(ಮೂಲ ಮತ್ತು ತಾತ್ಪರ್ಯ)

ಸಂಪಾದಕರು :
ಜಿ. ಅಶ್ವತ್ಥನಾರಾಯಣ, ಎಂ.ಎ.,
(ಕನ್ನಡ ಅಧ್ಯಾಪಕ, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು)
ಕಾ. ಪ. ವೃಷಭರಾಜು, ಬಿ.ಎಸ್ಸಿ.,ಬಿ.ಇಡಿ.,
(ಕಾರ್ಯದರ್ಶಿ, ಮಹಾವೀರ ಮಿಶನ್, ಬೆಂಗಳೂರು.)

ಶ್ರೀ ಮಹಾವೀರ ಮಿಶನ್ (ರಿ)
ಶಂಕರಪುರ ಬೆಂಗಳೂರು

1976 ಮೇ ಬೆಲೆ : 75 ಪೈಸೆ

Ratna Karanda Sravakachara (the House Holder's Dharma) Author : Samanta Bhadracharya.
Edited by G. Aswathanarayana & K. P. Vrushabha Raj.
Published by Sri Mahaveer Mission,
Krishnarajendra Road, Shankarpuram, Bangalore.
Pages 80 Year 1976 Price 0-75 Paise.

ಜೈನಧರ್ಮ ಪಠ್ಯ ಗ್ರಂಥಮಾಲೆ-4
ರತ್ನಕರಂಡಶ್ರಾವಕಾಚಾರ.

ಸಂಪಾದಕರು :
ಜಿ. ಅಶ್ವತ್ಥನಾರಾಯಣ.
ಕಾ. ಪ. ವೃಷಭರಾಜು

ಪ್ರಕಾಶಕರು :
ಶ್ರೀ ಮಹಾವೀರ ಮಿಶನ್, ಎಂ. ಟಿ. ಜೈನ ಬೋರ್ಡಿಂಗ್ ಹೋಂ
ಕೃಷ್ಣರಾಜೇಂದ್ರ ರಸ್ತೆ, ಶಂಕರಪುರಂ, ಬೆಂಗಳೂರು.

ಮುದ್ರಕರು :
ಪದ್ಮಾಂಬ ಪ್ರಿಂಟರ್ಸ್, ಬಸವನಗುಡಿ, ಬೆಂಗಳೂರು-4

ಪ್ರಕಾಶಕರ ಮಾತು

ಶ್ರೀ ಮಹಾವೀರ ಮಿರ್ಶ ಜೈನಧರ್ಮೀಯರ ಪುರೋಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದು ಅವುಗಳಪೈಕಿ ಜೈನಧರ್ಮ ಆಸಕ್ತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಜೈನ ಧರ್ಮ–ಶಾಸ್ತ್ರ–ಸಾಹಿತ್ಯ, ವಿಚಾರ ಗಳಲ್ಲಿ ಶಾಸ್ತ್ರೀಯವಾಗಿ ಅರಿವು ಮೂಡಿಸಲು ಪ್ರತಿವರ್ಷವೂ ಧಾರ್ಮಿಕ ಶಿಬಿರ ಗಳನ್ನೂ–ಪರೀಕ್ಷೆಗಳನ್ನೂ ಸುಮಾರು ಆರು ವರ್ಷಗಳಿಂದ ನಡೆಸುತ್ತಿದ್ದು, ಜೈನ ಧರ್ಮ ಪ್ರವೇಶಪರೀಕ್ಷಾವಿಭಾಗದಲ್ಲಿ(8 ವರ್ಷದೊಳಗಿನ ಮಕ್ಕಳಿಗೆ) ಮೌಖಿಕ, (8 ವರ್ಷಕ್ಕೆ ಮೇಲ್ಪಟ್ಟವರಿಗೆ) ಪ್ರಥಮ–ಮಧ್ಯಮ–ಉತ್ತಮ ಹಂತಗಳಲ್ಲಿ ಪರೀಕ್ಷೆಗಳನ್ನು ನಡೆಸುತ್ತಾ ಬಂದಿದೆ. ಪ್ರಥಮ–ಮಧ್ಯಮ ತರಗತಿಗಳಿಗೆ ಶ್ರೀರ್ಮಾ ಡಿ. ಪದ್ಮನಾಭಶರ್ಮರು ರಚಿಸಿದ ಜೈನಧರ್ಮಬೋಧೆ ಭಾಗ–1 ಮತ್ತು ಭಾಗ–2 ನ್ನು ನಿಯಮಿಸಿದೆ. ಉತ್ತಮ ತರಗತಿಗೆ–ದ್ರವ್ಯಸಂಗ್ರಹ ತತ್ವಾರ್ಥಸೂತ್ರ–ಮಹಾವೀರಸ್ವಾಮಿಜೀವನ – ಕರ್ನಾಟಕ ತೀರ್ಥಕ್ಷೇತ್ರಗಳ ನ್ನೊಳಗೊಂಡ ಪಠ್ಯವಿಷಯ ಗೊತ್ತುಮಾಡಿದೆ. ಆಸಕ್ತವಿದ್ಯಾರ್ಥಿಗಳ ಹೆಚ್ಚಿನ ಅಭ್ಯಾಸಕ್ಕಾಗಿ ಜೈನಧರ್ಮವಿಶಾರದ (ಪ್ರಥಮ) ಪರೀಕ್ಷೆಯನ್ನು ಈ ಸಾಲಿನಲ್ಲಿ ಪ್ರಾರಂಭಿಸಿದೆ. ಅದರ ಪಠ್ಯವಿವರದಲ್ಲಿ ತತ್ವಾರ್ಥಸೂತ್ರ–ರತ್ನಕರಂಡಶ್ರಾವಕಾ ಚಾರ–ಭಾರತದ ತೀರ್ಥಕ್ಷೇತ್ರಗಳು–ಜೈನಾಚಾರ್ಯರುಗಳ ಜೀವನದೊಂದಿಗೆ ಜನ್ನನ ಯಶೋಧರ ಚರಿತೆ ಅಧ್ಯಯನವನ್ನೂ ಸೇರಿಸಿದೆ. ಈ ಪರೀಕ್ಷೆಗಳ ಅಂಗವಾಗಿ ಶ್ರೀ ಮಹಾವೀರ ಮಿರ್ಶ ಪಠ್ಯ ಪುಸ್ತಕಗಳ ಅವಶ್ಯಕತೆಯನ್ನು ಪೂರೈಸಲು “ಜೈನಧರ್ಮ ಪಠ್ಯ ಗ್ರಂಥಮಾಲೆಯನ್ನು ಪ್ರಾರಂಭಿಸಿ ಈಗಾಗಲೇ 3 ಪುಸ್ತಕಗಳನ್ನು ಪ್ರಕಟಿಸಿದೆ. ಇದು ನಾಲ್ಕನೆಯ ಪಠ್ಯ ಪ್ರಕಟಣೆ. ಮಿರ್ಶ ರತ್ನಕರಂಡಶ್ರಾವಕಾಚಾರ ಪಠ್ಯ ಗ್ರಂಥವನ್ನು ಪ್ರಕಟಿಸಲು ಯೋಚಿಸಿ, ನೆರವಿಗಾಗಿ ದಾನಿಗಳ ಕಡೆ ನೋಡಿದಾಗ ತುಮಕೂರಿನ ದಿ|| ಶ್ಯಾಮರಾಜಪ್ಪ ನವರ ಹಿರಿಯಮಕ್ಕಳೂ, ಧರ್ಮಾಭಿಮಾನಿಗಳೂ, ಸಮಾಜದ ಮುಖಂಡರೂ, ಆದ ಶ್ರೀ ಡಿ. ಎಸ್. ಪದ್ಮರಾಜಯ್ಯ ಮತ್ತು ಅವರ ಧರ್ಮಪತ್ನಿ ಶ್ರೀಮತಿ

ಶಾರದಮ್ಮ ಪದ್ಮರಾಜಯ್ಯನವರು ಮುಂದೆ ಬಂದು ಈ ಪುಸ್ತಕದ ವೆಚ್ಚದ ಸಿಂಹ ಪಾಲನ್ನು ವಹಿಸಿಕೊಂಡು ಉಪಕರಿಸಿದ್ದಾರೆ. ಅವರ ಈ ಉಪಕಾರ ದಿಂದ ವಿಶೇಷ ಈ ಪುಸ್ತಕವನ್ನು ಹೊರತರುವುದು ಸುಲಭ ಸಾಧ್ಯವಾಯಿತು.

ಪುಸ್ತಕ ಪ್ರಕಟಿಸುವ ವ್ಯವಸ್ಥೆ ಮಾಡಿಸಲು ಈ ಪುಸ್ತಕವನ್ನು ಸರಳ ವಾಗಿ, ಕಿರಿಯರಿಗೆ ತಿಳಿಯುವಂತೆ ತಾತ್ಪರ್ಯ ಸಹಿತ ಸಂಪಾದಿಸುವ ಅವಶ್ಯ ಕತೆ ಕಂಡು ಬಂದಿತು. ಆಗ ಮಹಾವೀರ ಮಿಶನ್ನಿನ ಎಲ್ಲ ಕಾರ್ಯಗಳೂ ತಮ್ಮವೇ ಕಾರ್ಯವೆಂಬ ಅಭಿಮಾನದಿಂದ ಸಹಕರಿಸುತ್ತಾ ಬಂದಿರುವ ಶ್ರೀ ಜಿ. ಅಶ್ವತ್ಥನಾರಾಯಣ, ಎಂ. ಎ., ಅವರನ್ನು ಸಿದ್ಧಪಡಿಸಿಕೊಡಲು ಕೋರಿದೆವು. ಅವರು ತಮ್ಮ ಎಡೆಬಿಡದ ಕೆಲಸಗಳ ಮಧ್ಯೆಯೂ ಸಹಕರಿಸಿ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅಚ್ಚಿನ ಕರಡನ್ನು ಸಂಸ್ಕರಿಸಿದ್ದಾರೆ. ಅಚ್ಚುಮನೆಗೆ ಪದೇಪದೇ ಎಡೆ ತಾಕಿದ್ದಾರೆ. ಅವರ ಸಹಕಾರಕ್ಕೆ ವಿಶೇಷ ಆಭಾರಿಯಾಗಿದೆ. ಅಲ್ಲದೆ ಇದನ್ನು ಮುದ್ರಿಸಿ ಕೊಟ್ಟ ಪದ್ಮಾಂಬ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಹೆಚ್. ಎಸ್. ನೇಮಿನಾಥಯ್ಯನವರಿಗೂ, ಈ ಪುಸ್ತಕ ಪ್ರಕಟಣೆಯಲ್ಲಿ ಪ್ರತ್ಯಕ್ಷ, ಪರೋಕ್ಷವಾಗಿ ನೆರವಾದ ಎಲ್ಲ ಧರ್ಮಾಭಿಮಾನಿ ಗಳಿಗೂ ಕೃತಜ್ಞತಾ ಪೂರ್ವಕ ವಂದನೆಗಳು.

ಈ ಪುಸ್ತಕದಲ್ಲಿ ಪ್ರತಿ ಶ್ಲೋಕ ಮತ್ತು ಅದರ ವಿಷಯ ತಿಳಿಯಲು, ಶ್ಲೋಕ ವಿಷಯಸೂಚಿ ಕೊಟ್ಟಿರುವುದರಿಂದ ವಿದ್ಯಾರ್ಥಿಗಳಿಗೆ ಹಾಗೂ ಅಭ್ಯಾಸಿಗಳಿಗೆ ಇದರಿಂದ ಬಹಳ ಅನುಕೂಲವಾಗುವುದೆಂದು ಭಾವಿಸಿದ್ದೇವೆ.

ನಾಗೇಂದ್ರಕುಮಾರ್
ಸಂಚಾಲಕರು

ಕಾ. ಪ. ವೃಷಭರಾಜ್
ಕಾರ್ಯದರ್ಶಿ

ಸಂಪಾದಕರ ನುಡಿ

ಸಾಮಾನ್ಯರಿಗೆ ಸಾಹಿತ್ಯ ಧರ್ಮ ಬೋಧನೆಮಾಡುವ ಕೆಲಸವನ್ನು ಕೈಗೊಂಡಿರುವ ಸಂಸ್ಥೆಗಳಲ್ಲಿ ಶ್ರೀ ಮಹಾವೀರ ಮಿಶನ್ ಪ್ರಸಿದ್ಧವಾಗಿದೆ. ಪ್ರತಿ ಧರ್ಮದವರೂ ತಮ್ಮ ತಮ್ಮ ಧರ್ಮದ ಶಾಸ್ತ್ರ-ಸಾಹಿತ್ಯ-ಆಚರಣೆಗಳನ್ನು ತಿಳಿದಿರಬೇಕು. ಆತ್ಮೋನ್ನತಿಗೆ ಮಾರ್ಗದರ್ಶನ ಪಡೆಯಬೇಕು ಎಂಬ ಹೆಬ್ಬಯಕೆಯಿಂದ ಮಹಾವೀರಮಿಶನ್ ಶಾಸ್ತ್ರ-ಸಾಹಿತ್ಯ-ಆಚಾರಧರ್ಮ ಮೂರೂ ಕ್ಷೇತ್ರಗಳಲ್ಲೂ ಜೈನ ಜನತೆಗಾಗಿ ವಿಶೇಷವಾಗಿ ಶ್ರಮಿಸುತ್ತಿದೆ. ಈ ಅಂಗವಾಗಿ ಗ್ರಂಥ ಪ್ರಕಟನೆಯೂ ಒಂದಾಗಿದೆ. ಇದುವರೆಗೆ ಅದು ಜೈನಧರ್ಮದ ಪಠ್ಯ ಗ್ರಂಥಮಾಲೆ ಎಂಬ ಮಾಲಿಕೆಯಲ್ಲಿ ಶ್ರೀ ಡಿ. ಪದ್ಮನಾಭಶರ್ಮರ ಜೈನಧರ್ಮ ಬೋಧೆ ಭಾಗ–1, ಭಾಗ–2, ರಾಮಚಂದ್ರ ಸ್ಯಾದ್ವಾದಿಯವರ ಜೈನಧರ್ಮ ಮೌಖಿಕ ಪಠ್ಯಪುಸ್ತಕ–ಇವುಗಳನ್ನು ಪ್ರಕಟಿಸಿದೆ. ಈಗ ಪ್ರಕಟವಾಗುತ್ತಿರುವ ರತ್ನಕರಂಡಶ್ರಾವಕಾಚಾರ ನಾಲ್ಕನೆಯದು. ಮಹಾವೀರ ಮಿಶನ್ ಜೈನವಿದ್ಯಾರ್ಥಿಗಳಿಗೆ ಧಾರ್ಮಿಕ ಶ್ರದ್ಧೆ, ಧರ್ಮಪರಿಚಯ ಶಾಸ್ತ್ರಜ್ಞಾನ ಸಾಹಿತ್ಯದ ಅರಿವು ಮೂಡಿಸಲು ಬೇಸಿಗೆಯ ಧಾರ್ಮಿಕ ಶಿಬಿರಗಳನ್ನುಏರ್ಪಡಿಸಿ ಆ ಸಂದರ್ಭದಲ್ಲಿ ತರಗತಿಗಳನ್ನು ನಡೆಸಿ ನಾಡಿನ ನಾನಾ ಭಾಗಗಳಲ್ಲಿ ಈಗ ಮೌಖಿಕ, ಪ್ರಥಮ ಮಧ್ಯಮ,ಉತ್ತಮ,ವಿಶಾರದ ಪ್ರಥಮ ಎಂಬ ಐದು ಶ್ರೇಣಿಯ ಪರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಪೈಕಿ ವಿಶಾರದ ಪ್ರಥಮಪರೀಕ್ಷೆಗೆ ರತ್ನಕರಂಡ ಶ್ರಾವಕಾಚಾರವನ್ನು ಪಠ್ಯವಾಗಿ ನಿಯಮಿಸಿದೆ.

ವಿದ್ಯಾರ್ಥಿಗಳ ದೃಷ್ಟಿಯಿಂದ ಈ ಪಠ್ಯವನ್ನು ಸಿದ್ಧಗೊಳಿಸಲು ಮಿಶನಿನವರು ನಮ್ಮನ್ನು ಕೇಳಿಕೊಂಡರು. ಆ ಮೇರೆಗೆ ಇದನ್ನು ಸಿದ್ಧಗೊಳಿಸಿದೆ. ಈ ಗ್ರಂಥವನ್ನು ಮೂಲ, ಅನ್ವಯ, ತಾತ್ಪರ್ಯ ಲಘು ಟಿಪ್ಪಣಿಗಳೊಂದಿಗೆ ಪ್ರಕಟಿಸಬೇಕೆಂದು ಉದ್ದೇಶವಿತ್ತು. ಆ ಬಗ್ಗೆ ಹಸ್ತಪ್ರತಿ ತಯಾರಿಸಲಾಗಿತ್ತು.

ಆದರೆ ಕಾಲಾವಕಾಶವಿಲ್ಲದೆ ಅತ್ಯಲ್ಪ ಕಾಲದಲ್ಲಿ ಇದು ಪ್ರಕಟವಾಗಬೇಕಾದ್ದರಿಂದ, ಕೇವಲ ಮೂಲ ಮತ್ತು ತಾತ್ಪರ್ಯ ನೀಡಿದ್ದೇವೆ. ವಿದ್ಯಾರ್ಥಿಗಳಿಗಾಗಿ ಶ್ಲೋಕ–ವಿಷಯ ಸೂಚಿಯನ್ನು ಕೊಟ್ಟಿದ್ದೇವೆ. ಮೂಲಕ್ಕೆ ತಾತ್ಪರ್ಯ ನೀಡುವಲ್ಲಿ ಅತಿಬಲ ಮಹಾರಾಜರ ಪ್ರಕಾಶನವಾದ ರತ್ನಕರಂಡಶ್ರಾವಕಾಚಾರ ಗ್ರಂಥದ ನೆರವನ್ನು ಪಡೆದಿದ್ದೇವೆ. ಅವರಿಗೆ ನಮ್ಮ ವಂದನೆಗಳು

ಸಾಮಾನ್ಯರಿಗೆ ಸುಲಭವೆನಿಸಲು ಪಂಡಿತರಿಗೆ ಗಹನವೆನಿಸುವ ಸರ್ವಜನ ಪ್ರಿಯವಾದ ಈ ಶಾಸ್ತ್ರ ಗ್ರಂಥವನ್ನು ಸಿದ್ಧಗೊಳಿಸಲು ಅವಕಾಶಮಾಡಿ ಇದರ ವಿಶೇಷ ಅಧ್ಯಯನ ಮಾಡಲು ನಮಗೆ ಅವಕಾಶ ಮಾಡಿದ್ದಕ್ಕೆ ಮಹಾವೀರ ಮಿಶನ್ನಿನವರಿಗೆ ನಾವು ಕೃತಜ್ಞರಾಗಿದ್ದೇವೆ. ವಿದ್ಯಾರ್ಥಿಗಳು, ಜೈನ ಬಾಂಧವರು ಇದರ ಸದುಪಯೋಗ ಹೊಂದಿದರೆ ನಮ್ಮ ಉದ್ದೇಶ ಸಾರ್ಥಕವಾಗುತ್ತದೆ.

ಸಂಪಾದಕರು

ತಾ|| 10–4–76
ಬೆಂಗಳೂರು

ಜಿ. ಅಶ್ವತ್ಥನಾರಾಯಣ
ಕಾ. ಪ. ವೃಷಭರಾಜ್

ರತ್ನಕರಂಡ-ಶ್ರಾವಕಾಚಾರ

ಶ್ಲೋಕ - ವಿಷಯ - ಸೂಚಿ

ಅಧ್ಯಾಯ : 1

ಸಮ್ಯಕ್ ದರ್ಶನದ ವರ್ಣನೆ

ಅಧ್ಯಾಯ : 2

ಸಮ್ಯಕ್ ಜ್ಞಾನದ ವರ್ಣನೆ

ಅಧ್ಯಾಯ : 3

ಸಮ್ಯಕ್ ಚಾರಿತ್ರದ ವರ್ಣನೆ

ಅಧ್ಯಾಯ : 4

ಗುಣವ್ರತಗಳ ವರ್ಣನೆ

ಅಧ್ಯಾಯ : 5

ಶಿಕ್ಷಾವ್ರತಗಳ ವರ್ಣನೆ

ಅಧ್ಯಾಯ : 6

ಸಲ್ಲೇಖನಾವ್ರತದ ವರ್ಣನೆ

ಅಧ್ಯಾಯ : 7

ಏಕಾದಶಪ್ರತಿಮೆಗಳ ವರ್ಣನೆ

ಭೂ ಮಿ ಕೆ

ಸ್ವಾಮಿ ಸಮಂತಭದ್ರಾಚಾರ್ಯರು ರಾಜವಂಶದಲ್ಲಿ ಹುಟ್ಟಿದವರು ಅನಂತರ ವೈರಾಗ್ಯವು ಅಂಕುರಿಸಿ ದೀಕ್ಷೆಯನ್ನು ಕೈಗೊಂಡರು. ಇವರು ನೀತಿ ಶಾಸ್ತ್ರಕೋವಿದರೂ, ಸಮರ್ಥರೂ, ಪ್ರತಿಭಾಶಾಲಿಗಳೂ ಆದ ವಿದ್ವಾಂಸರು ಮತ್ತು ಗ್ರಂಥಕರ್ತೃಗಳು. ಜೈನಧರ್ಮದ ಸಮಗ್ರಸ್ವರೂಪವನ್ನು ತಿಳಿದಿದ್ದರು. ದರ್ಶನಶಾಸ್ತ್ರದಲ್ಲಿ ಅದ್ವಿತೀಯ ಪಾರಂಗತರು.

ಈ ಮಹಾನ್ ಆಚಾರ್ಯರಿಗೆ ಅಸಾತಾವೇದನೀಯ ಕರ್ಮದ ಉದಯದಿಂದ ಭಸ್ಮರೋಗವು ಬಂದಿತು. ಆಗ ಅವರು ಕೆಲವು ಕಾಲ ಮುನಿ ಧರ್ಮವನ್ನು ಬಿಟ್ಟು, ಕಂಚಿಪಟ್ಟಣದ ರಾಜನಾಗಿದ್ದ ಶಿವಕೋಟಿಯಲ್ಲಿಗೆ ಹೋಗಿ, ಯಥೇಚ್ಛೆಯಿಂದ ಆಹಾರ ಸೇವನೆಯಿಂದ ಭಸ್ಮರೋಗವನ್ನು ನಿವಾರಿಸಿಕೊಂಡು ಮತ್ತೆ ಮುನಿದೀಕ್ಷೆಯನ್ನು ಸ್ವೀಕರಿಸಿದರು. ಶಿವಕೋಟಿ ಮಹಾರಾಜನು ಕೂಡ ಇವರ ಪ್ರಭಾವದಿಂದ ಜೈನಧರ್ಮದೀಕ್ಷೆಯನ್ನು ವಹಿಸಿದನು.

ಜೈನಧರ್ಮಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಸ್ವಾಮಿಸಮಂತ ಭದ್ರಾಚಾರ್ಯರು ರಚಿಸಿದ್ದಾರೆ. ಆಪ್ತಮೀಮಾಂಸಾ (ದೇವಾಗಮ), ಯುಕ್ತ್ಯನುಶಾಸನ, ಸ್ವಯಂಭೂಸ್ತೋತ್ರ, ಜಿನಸ್ತುತಿಶತಕ, ರತ್ನಕರಂಡಕಶ್ರಾವಕಾಚಾರ, ಜೀವಸಿದ್ಧಿ, ತತ್ವಾನುಶಾಸನ, ಪ್ರಾಕೃತವ್ಯಾಕರಣ, ಪ್ರಮಾಣ ಪದಾರ್ಥ, ಕರ್ಮಪ್ರಾಭೃತಟೀಕೆ, ಗಂಧಹಸ್ತಿಮಹಾಭಾಷ್ಯ ಮೊದಲಾದುವು ಅವರ ಕೃತಿಗಳು.

ರತ್ನಕರಂಡಕಶ್ರಾವಕಾಚಾರವು ಶ್ರಾವಕರು ಅವಶ್ಯವಾಗಿ ಆಚರಿಸಬೇಕಾದ ಚಾರಿತ್ರಗಳನ್ನು ತಿಳಿಸುತ್ತದೆ. ಇದು ಮುಖ್ಯವಾಗಿ ಸಮ್ಯಗ್ದರ್ಶನ,


ಸಮ್ಯಜ್ಞಾನ ಮತ್ತು ಸಮ್ಯಕ್ಚಾರಿತ್ರವೆಂದು ಮೂರು ವಿಧವಾಗಿದೆ. ಸಮ್ಯಗ್ದರ್ಶನದ ಅಧಿಕಾರದಲ್ಲಿ ಆಪ್ತನ ಲಕ್ಷಣ, ಆಗಮಗಳ ಸ್ವರೂಪ, ಗುರುಗಳ ಸ್ವರೂಪ, ಅಷ್ಟಾಂಗಗಳು, ಮೂಢತ್ರಯ, ಅಷ್ಟಮದಗಳು ಮೊದಲಾದುವುಗಳ ವರ್ಣನೆಯಿದೆ. ಸಮ್ಯಜ್ಞಾನದ ಅಧಿಕಾರದಲ್ಲಿ, ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ ಮತ್ತು ದ್ರವ್ಯಾನುಯೋಗಗಳ ಸ್ವರೂಪವನ್ನು ತಿಳಿಸಲಾಗಿದೆ. ಸಮ್ಯಕ್ ಚಾರಿತ್ರಾಧಿಕಾರದಲ್ಲಿ ಪಂಚ ಅಣುವ್ರತಗಳು, ಶಿಕ್ಷಾವ್ರತಗಳು, ಅಷ್ಟಮೂಲಗುಣಗಳು, ಮೂರು ಗುಣವ್ರತಗಳು ಮೊದಲಾದುವುಗಳ ವರ್ಣನೆ ಬರುತ್ತದೆ.

ಈ ಕೃತಿಯು ಶ್ರಾವಕರ ಅಭ್ಯಾಸಕ್ಕೆ ಸುಲಭಗ್ರಾಹ್ಯವಾಗಿದ್ದು ಅನುಕೂಲವಾಗಿದೆ. ಇದನ್ನು ಮಹಾವೀರ ಮಿಶನ್ನಿನವರು ಪ್ರಕಟಿಸಿ ಉಪಕಾರ ಮಾಡಿದ್ದಾರೆ. ಅವರ ಪ್ರಯತ್ನ ಸಾರ್ಥಕವಾಗುವುದರಲ್ಲಿ ಸಂಶಯವಿಲ್ಲ.

ಡಿ. ಪದ್ಮನಾಭಶರ್ಮ, ಭುವನಹಳ್ಳಿ.

ರತ್ನಕರಂಡಶ್ರಾವಕಾಚಾರ ಗ್ರಂಥದ ಪ್ರಕಟಣೆಗೆ

ನೆರವಾದ ದಾನಿಗಳು




ತುಮಕೂರಿನ ದಿ॥ ಶಾಮರಾಜಪ್ಪನವರ ಹಿರಿಯ ಪುತ್ರರಾದ

ಶ್ರೀ ಡಿ. ಎಸ್. ಪದ್ಮರಾಜಯ್ಯ

ಮತ್ತು

ಧರ್ಮಪತ್ನಿ ಶ್ರೀಮತಿ ಶಾರದಮ್ಮ ಪದ್ಮರಾಜಯ್ಯನವರು

—ಮೇಲ್ಕಂಡ ದಾನಿಗಳಿಗೆ ಮಹಾವೀರ ಪ್ರಿಂಟರ್ಸ್ ಕೃತಜ್ಞವಾಗಿದೆ.



ರತ್ನಕರಂಡಶ್ರಾವಕಾಚಾರ

ಮಂಗಲಾಚರಣ

ನಮಃಶ್ರೀವರ್ಧಮಾನಾಯ ।
ನಿರ್ಧೂತಕಲಿಲಾತ್ಮನೇ ॥
ಸಾಲೋಕಾನಾಂ ತ್ರಿಲೋಕಾನಾ ।
ಯದ್ವಿದ್ಯಾದರ್ಪಣಾಯತೇ ॥ ೧ ॥

ತಾತ್ಪರ್ಯ—ಯಾರ ಆತ್ಮಾದಿಂದ ಜ್ಞಾನಕ್ಕೆ ಮುಸುಕು ಹಾಕುವ ಘಾತಿಕರ್ಮಗಳು ನಾಶಹೊಂದಿದ್ದರಿಂದ ಅವರ ಶುದ್ಧಜ್ಞಾನದಲ್ಲಿ ಮೂರು ಲೋಕ ಮತ್ತು ಆ ಲೋಕಗಳು ದರ್ಪಣದಂತೆ ಪ್ರತಿಬಿಂಬಿತವಾಗಿವೆ. ಅಂಥ ಶ್ರೀ ವರ್ಧಮಾನಸ್ವಾಮಿಗಳಿಗೆ ನಮಸ್ಕಾರ.

ದೇಶಯಾಮಿ ಸಮೀಚೀನಂ
ಧರ್ಮಂ ಕರ್ಮನಿಬರ್ಹಣಂ ॥
ಸಂಸಾರದುಃಖತಃ ಸತ್ವಾನ್
ಯೋ ಧರತ್ಯುತ್ತಮೇ ಸುಖೇ ॥ ೨ ॥

ತಾತ್ಪರ್ಯ—ಯಾವ ಧರ್ಮವನ್ನು ಅನುಸರಿಸುವುದರಿಂದ ಸಕಲ ಪ್ರಾಣಿ ಮಾತ್ರರು ಸಂಸಾರ ದುಃಖಗಳೊಳಗಿಂದ ಮುಕ್ತರಾಗಿ ಉತ್ತಮ ಪ್ರಕಾರದ ಸುಖವನ್ನು ಪಡೆಯುತ್ತಾರೆ. ಮತ್ತು ಯಾವುದರಿಂದ ಕರ್ಮವು ನಾಶಹೊಂದುತ್ತದೆ, ಅಂಥ ಉತ್ಕೃಷ್ಟವಾದ ಧರ್ಮದ ಉಪದೇಶವನ್ನು ನಾನು ಮಾಡುತ್ತೇನೆಂದು ಆಚಾರ್ಯರಾದ ಸಮಂತ ಭದ್ರಸ್ವಾಮಿಗಳು ಹೇಳುತ್ತಾರೆ.

ಸದ್ದೃಷ್ಟಿಜ್ಞಾನವೃತ್ತಾನಿ
ಧರ್ಮಂ ಧರ್ಮೇಶ್ವರಾ ವಿದುಃ ॥
ಯದೀಯಪ್ರತ್ಯನೀಕಾನಿ
ಭವಂತಿ ಭವಪದ್ಧತಿಃ ॥ ೩ ॥

ತಾತ್ಪರ್ಯ—ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್ ಚಾರಿತ್ರ ಇವುಗಳಿಗೆ ಪರಮೇಶ್ವರನು ಧರ್ಮವೆಂದು ಹೇಳಿದ್ದಾನೆ. ಇವುಗಳಿಗೆ ವಿರುದ್ಧವಾಗಿರುವ ಮಿಥ್ಯಾದರ್ಶನ, ಮಿಥ್ಯಾಜ್ಞಾನ ಮತ್ತು ಮಿಥ್ಯಾಚಾರಿತ್ರ, ಇವು ಸಂಸಾರವನ್ನು (ಭವಗಳನ್ನು) ಬೆಳಸುವದಕ್ಕೆ ಕಾರಣವಾಗಿವೆ.

ಶ್ರದ್ಧಾನಂ ಪರಮಾರ್ಥಾನಾ
ಮಾಪ್ತಾಗಮತಪೋಭೃತಾಂ ॥
ತ್ರಿಮೂಢಾಪೋಢಮಷ್ಟಾಂಗಂ
ಸಮ್ಯಗ್ದರ್ಶನಮಸ್ಮಯಂ ॥ ೪ ॥

ತಾತ್ಪರ್ಯ—ಸತ್ಯಾರ್ಥ, ದೇವ, ಗುರು ಮತ್ತು ಶಾಸ್ತ್ರಗಳಮೇಲೆ, ಮೂರು ಪ್ರಕಾರದ ಮೂಢತೆ, ಮತ್ತು ಮದರಹಿತ ಹಾಗೂ ಎಂಟು ಅಂಗಗಳಿಂದ ಸಹಿತವಾದ ಶ್ರದ್ಧೆಯನ್ನಿಡುವದಕ್ಕೆ ಸಮ್ಯಗ್‌ದರ್ಶನವೆಂದೆನ್ನುತ್ತಾರೆ.

ಆಪ್ತೇನೋಚ್ಛಿನ್ನದೋಷೇಣ
ಸರ್ವಜ್ಞೇನಾಗಮೇಶಿನಾ ॥
ಭವಿತವ್ಯಂ ನಿಯೋಗೇನ
ನಾನ್ಯಥಾ ಹ್ಯಾಪ್ತತಾ ಭವೇತ್ ॥ ೫ ॥

ತಾತ್ಪರ್ಯ—ಯಾವನ ದೋಷಗಳು ದೂರಾಗಿವೆ, ಯಾವನು ಎಲ್ಲ ಪದಾರ್ಥಗಳನ್ನು ತಿಳಿಯುವವನಾಗಿ ಆಗಮಗಳ ಸ್ವಾಮಿಯಾಗಿದ್ದಾನೆ. ಅವನಲ್ಲಿಯೇ ಆಪ್ತತ್ವವಿರುವದು ಯೋಗ್ಯವಾಗಿದೆ. ನಿರ್ದೋಷತ್ವ, ಸರ್ವಜ್ಞತೆ ಮತ್ತು ಆಗಮೇಶತ್ವ ಈ ಮೂರು ಗುಣಗಳೂ ಇಲ್ಲದ ಹೊರತು ಆಪ್ತತ್ವವು ಬರುದಿಲ್ಲ.

ಕ್ಷುತ್ಪಿಪಾಸಾಜರಾತಂಕ
ಜನ್ಮಾಂತಕಭಯಸ್ಮಯಾಃ ॥
ನ ರಾಗದ್ವೇಷಮೋಹಾಶ್ಚ
ಯಸ್ಯಾಪ್ತಃ ಸ ಪ್ರಕೀರ್ತ್ಯತೇ ॥ ೬ ॥

ತಾತ್ಪರ್ಯ—ಯಾವನಿಗೆ ಹಸಿವೆ, ನೀರಡಿಕೆ, ಮುಪ್ಪು, ರೋಗ, ಜನ್ಮ, ಮೃತ್ಯು, ಭಯ, ಮದ, ರಾಗ, ದ್ವೇಷ, ಮೋಹ, ಚಿಂತೆ, ರತಿ, ನಿದ್ರಾ, ವಿಸ್ಮಯ, ವಿಷಾದ, ಸ್ವೇದ, ಮತ್ತು ಖೇದ ಈ ಹದಿನೆಂಟು ದೋಷಗಳು ಇರುವುದಿಲ್ಲವೋ ಅವನನ್ನು ಆಪ್ತನೆನ್ನಬೇಕು.

ಪರಮೇಷ್ಠೀ ಪರಂಜೋತಿ
ರ್ವಿರಾಗೋ ವಿಮಲಃ ಕೃತೀ ॥
ಸರ್ವಜ್ಞೋನಾದಿಮಧ್ಯಾಂತಃ
ಸಾರ್ವಃ ಶಾಸ್ತೋಪಲಾಲ್ಯತೇ ॥ ೭ ॥

ತಾತ್ಪರ್ಯ—ಆಪ್ತನಿಗೆ ಇರುವ ಪರ್ಯಾಯ ಹೆಸರುಗಳು—ಪರಮೇಷ್ಠೀ ಅಂದರೆ ಉತ್ಕೃಷ್ಟಪದದಲ್ಲಿ ಇರುವನು ; ಪರಂಜೋತಿಃ ಎಂದರೆ ಯಾವನ ಜೋತಿಯು ನಿರಾವರ್ಣ ಜ್ಞಾನರೂಪವಾಗಿದೆ ; ವಿರಾಗಃ ಎಂದರೆ ಯಾವನ ರಾಗವು (ಪ್ರೀತಿಯು) ಇಲ್ಲದಂತಾಗಿದೆ ; ವಿಮಲಃ ಎಂದರೆ ಯಾವನ ಕರ್ಮರೂಪವಾದ ಮಲವು ಇಲ್ಲದಂತಾಗಿದೆ ; ಕೃತೀ ಎಂದರೆ ಯಾವನು ಮಾಡತಕ

ಕೆಲಸಗಳನ್ನು ಮಾಡಿಬಿಟ್ಟಿದ್ದಾನೆ ; ಸರ್ವಜ್ಞಃ ಎಂದರೆ ಎಲ್ಲ ತಿಳಿಯುವವನು; ಅನಾದಿಮಧ್ಯಾಂತಃ ಅಂದರೆ ಯಾವನಿಗೆ ಆದಿ, ಅಂತ್ಯ ಮತ್ತು ಮಧ್ಯ ಇವು ಇಲ್ಲ; ಸಾರ್ವಃ ಎಂದರೆ ಎಲ್ಲರ ಹಿತಕರ್ತನು ; ಶಾಸ್ತಾ ಎಂದರೆ ಎಲ್ಲರಿಗೂ ಶಿಕ್ಷಣ ಕೊಡುವವನು.

ಅನಾತ್ಮಾರ್ಥಂ ವಿನಾರಾಗೈಃ
ಶಾಸ್ತಾ ಶಾಸ್ತಿ ಸತೋ ಹಿತಂ ॥
ಧ್ವನನ್ ಶಿಲ್ಪಿಕರಸ್ಪರ್ಶಾ
ನ್ಮುರಜಃ ಕಿಮಪೇಕ್ಷತೇ ॥ ೮ ॥

ತಾತ್ಪರ್ಯ—ಶಿಲ್ಪಿಕಾರ (ವಾದ್ಯಗಾರ) ನ ಹಸ್ತವು ಮೃದಂಗದಮೇಲೆ ಬಿದ್ದ ಕೂಡಲೇ ಅದು (ಆ ಮೃದಂಗಕ್ಕೆ ಶಬ್ದವನ್ನು ಉತ್ಪನ್ನಮಾಡುವ ಇಚ್ಛೆ ಯಿಲ್ಲದಿದ್ದರೂ) ಶಬ್ದವನ್ನು ಮಾಡುವಂತೆ, ಶಾಸ್ತಾ ಎಂದರೆ ಉಪದೇಶ ಮಾಡು ವವನಾದ ಅರಿಹಂತ ಭಗವಾನನು ಸ್ವಂತ ಪ್ರಯೋಜನ ರಹಿತನಾಗಿದ್ದರೂ ಮತ್ತು ಅನ್ಯ ಜೀವಗಳ ಮೇಲೆ ಮೋಹವಿಲ್ಲದವನಾಗಿದ್ದರೂ, ಸತ್ಪುರುಷರ ಕಲ್ಯಾಣಾರ್ಥ ಶಿಕ್ಷೆಯನ್ನು ಎಂದರೆ ಉಪದೇಶವನ್ನು ಕೊಡುತ್ತಾನೆ.

ಆಪ್ತೋಪಜ್ಞಮನುಲ್ಲಂಘ್ಯ
ಮದೃಷ್ಟೇಷ್ಟವಿರೋಧಕಂ ॥
ತತ್ವೋಪದೇಶಕೃತ್ ಸಾರ್ವಂ
ಶಾಸ್ತ್ರಂ ಕಾಪಥಘಟ್ಟನಂ ॥ ೯ ॥

ತಾತ್ಪರ್ಯ—ಶಾಸ್ತ್ರದ ಲಕ್ಷಣವು–ಯಾವುದು ಸರ್ವಜ್ಞನಾದ ಆಪ್ತ ನಿಂದಹೇಳಲ್ಪಟ್ಟಿದೆ, ಯಾವುದನ್ನು ವಾದೀ ಪ್ರತಿವಾದಿಗಳುಉಲ್ಲಂಘಿಸಲಾರರು, ಯಾವುದು ಪ್ರತ್ಯಕ್ಷ ಪರೋಕ್ಷ ಪ್ರಮಾಣಗಳಿಗೆ ಬಾಧೆಯನ್ನು ತರುವುದಿಲ್ಲ, ಯಾವುದರಲ್ಲಿ ತತ್ವದ ಉಪದೇಶವಿರುವುದು, ಯಾವುದರಲ್ಲಿ ಎಲ್ಲರ ಹಿತವು

ವರ್ಣಿಸಲ್ಪಟ್ಟಿದೆ ಮತ್ತು ಯಾವುದರಲ್ಲಿ ಕುಮಾರ್ಗದ ಖಂಡನೆ ಮಾಡಲ್ಪಟ್ಟಿದೆ ಅದೇ ಶಾಸ್ತ್ರ.

ವಿಷಯಾಶಾವಶಾತೀತೋ
ನಿರಾರಂಭೋಽಪರಿಗ್ರಹಃ ॥
ಜ್ಞಾನಧ್ಯಾನತಪೋರಕ್ತ
ಸ್ತಪಸ್ವೀ ಸ ಪ್ರಶಸ್ಯತೇ ॥ ೧೦ ॥

ತಾತ್ಪರ್ಯ---ಗುರುಗಳ ಲಕ್ಷಣ-ಯಾವನಿಗೆ ವಿಷಯದಲ್ಲಿ ಆಸೆಯಿಲ್ಲ, ಯಾವನು ಆರಂಭ ಮತ್ತು ಪರಿಗ್ರಹ ಇವುಗಳನ್ನು ತ್ಯಜಿಸಿ ಜ್ಞಾನ, ಧ್ಯಾನ ಮತ್ತು ತಪ ಇವುಗಳಲ್ಲಿ ನಿಮಗ್ನನಾಗಿರುತ್ತಾನೆ. ಅವನಿಗೆ ತಪಸ್ವೀ ಎಂದರೆ ಗುರುಯೆಂದೆನ್ನಬೇಕು.

ಇದಮೇವೇದೃಶಮೇವ
ತತ್ವಂ ನಾನ್ಯನ್ನ ಚಾನ್ಯಥಾ ॥
ಇತ್ಯಕಂಪಾಯಸಾಂಭೋವ
ಸ್ಸನ್ಮಾರ್ಗೇ ಸಂಶಯಾರುಚಿಃ ॥ ೧೧ ॥

ತಾತ್ಪರ್ಯ---ತತ್ವವು ಇದೇ ಮತ್ತು ಹೀಗೇ ಇರುತ್ತದೆ. ಅನ್ಯ ಅಥವಾ ಅನ್ಯ ಪ್ರಕಾರದ್ದು ಇರುವದಿಲ್ಲ, ಹೀಗೆ ಅಚಲವಾದ ಅಸಿಧಾರೆಯ (ಅಸಿ = ಖಡ್ಗ, ಧಾರಾ = ಹದನಾದ ಭಾಗ) ಪ್ರವಾಹದಂತೆ ಸನ್ಮಾರ್ಗದ ವಿಷಯವಾಗಿ ಸಂಶಯರಹಿತವಾದ ರುಚಿ ಇರುವುದಕ್ಕೆ "ನಿಃಶಂಕಿತಾಂಗ" ವೆಂದೆನ್ನುತ್ತಾರೆ.

ಕರ್ಮಪರವಶೇ ಸಾಂತೇ
ದುಃಖೈರಂತರಿತೋದಯೇ ॥
ಪಾಪಬೀಜೇ ಸುಖೇನಾಸ್ಥಾ
ಶ್ರದ್ಧಾನಾಕಾಂಕ್ಷಣಾ ಸ್ಮೃತಾ ॥ ೧೨ ॥

ತಾತ್ಪರ್ಯ— ಕರ್ಮಗಳಿಗೆ ಸ್ವಾಧೀನವಾಗಿರುವ, ಕೊನೆಗೆ ನಾಶ ಹೊಂದುವ, ಉದಯ (ಪ್ರಾರಂಭ) ಕಾಲಕ್ಕೆ ದುಃಖಮಿಶ್ರಿತವಾಗಿರುವ ಮತ್ತು ಪಾಪದ ಬೀಜರೂಪವಾಗಿರುವ ಸುಖದಲ್ಲಿ ಅಸಿತ್ಯತೆಯ ಶ್ರದ್ಧೆಯನ್ನಿಡುವುದಕ್ಕೆ ನಿಃಕಾಂಕ್ಷಿತ ಅಂಗವೆಂದೆನ್ನುತ್ತಾರೆ.

ಸ್ವಭಾವತೋಽಶುಚೌ ಕಾಯೇ
ರತ್ನತ್ರಯಪವಿತ್ರಿತೇ ॥
ನಿರ್ಜುಗುಪ್ಸಾಗುಣಪ್ರೀತಿ
ರ್ಮತಾ ನಿರ್ವಿಚಿಕಿತ್ಸತಾ ॥ ೧೩ ॥

ತಾತ್ಪರ್ಯ—ಶರೀರ ಮೂಲತಃ ಅಮಂಗಲವಾದದ್ದು, ಆದರೆ ಯಾರು ಅದನ್ನು ರತ್ನತ್ರಯಗಳಿಂದ ಪವಿತ್ರ ಮಾಡಿದ್ದಾರೆ, ಅವರ ಗುಣಗಳ ಮೇಲೆ ಪ್ರೀತಿಯನ್ನಿಟ್ಟು ಅವರ ಶರೀರಗಳ ವಿಷಯವಾಗಿ ಮೋಹವನ್ನು ಪಡೆಯದೆ ಇರುವುದಕ್ಕೆ ನಿರ್ವಿಚಿಕಿತ್ಸಾ ಅಂಗವೆಂದೆನ್ನುತ್ತಾರೆ.

ಕಾಪಥೇ ಪಥಿ ದುಃಖಾನಾಂ
ಕಾಪಥಸ್ಥೇಽಪ್ಯಸಂಮತಿಃ ॥
ಅಸಂಪೃಕ್ತಿರನುತ್ಕೀರ್ತಿ
ರಮೂಢಾ ದೃಷ್ಟಿರುಚ್ಯತೇ ॥ ೧೪ ॥

ತಾತ್ಪರ್ಯ—ದುಃಖದಾಯಕವಾದ ಸುಳ್ಳುಮಾರ್ಗದಲ್ಲಿರುವ ಜನರ ವಿಷಯವಾಗಿ ಮನಸ್ಸಿನಲ್ಲಿ ಸಮ್ಮತಿಯನ್ನಿಡಬಾರದು, ಶರೀರದಿಂದ ಪ್ರಶಂಸನೆಯನ್ನು ಮಾಡಬಾರದು ಮತ್ತು ವಾಚೆಯಿಂದ ಸ್ತುತಿಯನ್ನು ಮಾಡಬಾರದು; ಇದಕ್ಕೆ ಮೂಢದೃಷ್ಟಿ ಅಂಗವೆಂದೆನ್ನುತ್ತಾರೆ.

ಸ್ವಯಂಶುದ್ಧಸ್ಯ ಮಾರ್ಗಸ್ಯ
ಬಾಲಾಶಕ್ತಜನಾಶ್ರಯಾಂ ॥
ವಾಚ್ಯತಾಂ ಯತ್ಪ್ರಮಾರ್ಜಂತಿ
ತದ್ವದಂತ್ಯುಪಗೂಹನಂ ॥ ೧೫ ॥

ತಾತ್ಪರ್ಯ—ಸ್ವಯಂ ಶುದ್ಧವಾದ ಮೋಕ್ಷಮಾರ್ಗದಲ್ಲಿ ಅಜ್ಞಾನೀ ಮತ್ತು ಅಶಕ್ತ ಜನರಿರುವದರಿಂದ ಆ ಮಾರ್ಗದ ನಿಂದೆಯಾಗುತ್ತಿದ್ದರೆ ಅದನ್ನು ದೂರಮಾಡುವುದಕ್ಕೆ ಉಪಗೂಹನ ಅಂಗವೆಂದೆನ್ನುತಾರೆ.

ದರ್ಶನಾಚ್ಚರಣಾದ್ವಾಪಿ
ಚಲತಾಂ ಧರ್ಮವತ್ಸಲೈಃ ॥
ಪ್ರತ್ಯವಸ್ಥಾಪನಂ ಪ್ರಾಜ್ಞೈಃ
ಸ್ಥಿತೀಕರಣಮುಚ್ಯತೇ ॥ ೧೬ ॥

ತಾತ್ಪರ್ಯ—ಸಮ್ಯಗ್ದರ್ಶನದಿಂದ ಇಲ್ಲವೆ ಸಮ್ಯಕ್ಚಾರಿತ್ರದಿಂದ ಚಲನವಾಗುವ ಪ್ರಾಣಿಗಳಿಗೆ, ಧರ್ಮದಮೇಲೆ ಪ್ರೀತಿಯನ್ನಿಡುವ ಸಮಂಜಸ ಜನರು ಸಹಾಯಮಾಡಿ ಅವರನ್ನು ಅವುಗಳಲ್ಲಿ ಸ್ಥಿರಪಡಿಸುವದಕ್ಕೆಸ್ಥಿತೀಕರಣ ಅಂಗವೆಂದೆನ್ನುತ್ತಾರೆ.

ಸ್ವಯೂಥ್ಯಾನ್ ಪ್ರತಿಸದ್ಭಾವ
ಸನಾಥಾಪೇತಕೈತವಾ ||
ಪ್ರತಿಪತ್ತಿರ್ಯಥಾಯೋಗ್ಯಂ
ವಾತ್ಸಲ್ಯಮಭಿಲಪ್ಯತೆ || ೧೭ ||

ತಾತ್ಪರ್ಯ—ಸತ್ಯವಾದ ಭಾವನೆಯಿಂದ ಕಪಟವನ್ನು ಬಿಟ್ಟು ತಮ್ಮ ಧರ್ಮಬಂಧುಗಳ ಯಥಾಯೋಗ್ಯ ಸತ್ಕಾರ ಮಾಡುವದಕ್ಕೆ ವಾತ್ಸಲ್ಯವೆಂದೆನ್ನು ತ್ತಾರೆ.

ಅಜ್ಞಾನತಿಮಿರವ್ಯಾಪ್ತಿ
ಮಪಾಕೃತ್ಯ ಯಥಾಯಥಂ ||
ಜಿನಶಾಸನಮಾಹಾತ್ಮ್ಯ
ಪ್ರಕಾಶಃ ಸ್ಯಾತ್ಪ್ರಭಾವನಾ || ೧೮ ||

ತಾತ್ಪರ್ಯ—ಅಜ್ಞಾನ ರೂಪದಿಂದ ವ್ಯಾಪಿಸಿಕೊಂಡು ಕತ್ತಲೆಯನಾಶ ವನ್ನು ಪಡಿಸಿ, ಆದಷ್ಟುಮಟ್ಟಿಗೆ ಜೈನಧರ್ಮದ ಮಹತ್ವವನ್ನು ಪ್ರಕಟಮಾಡು ವುದೇ ಪ್ರಭಾವನೆ.

ತಾವದಂಜನಚೌರೋಂಗೇ
ತತೋನಂತಮತಿಃ ಸ್ಮೃತಾ ||
ಉದ್ದಾಯನಸ್ತೃತೀಯೇಪಿ
ತುರೀಯೇ ರೇವತೀ ಮತಾ || ೧೯ ||

ತತೋ ಜಿನೇಂದ್ರಭಕ್ತೋನ್ಯೋ
ವಾರಿಷೇಣಸ್ತತಃ ಪರಃ ||
ವಿಷ್ಣುಶ್ಚ ವಜ್ರನಾಮಾ ಚ
ಶೇಷಯೋರ್ಲಕ್ಷ್ಯತಾಂ ಗತೌ || ೨೦ ||

ತಾತ್ಪರ್ಯ—ಮೊದಲನೆಯ ನಿಃಶಂಕಿತ ಅಂಗದಲ್ಲಿ ಅಂಜನಚೋರನು, ಎರಡನೆಯ ನಿಃಕಾಂಕ್ಷಿತ ಅಂಗದಲ್ಲಿ ಅನಂತಮತಿಯು, ಮೂರನೆಯ ನಿರ್ವಿಚಿಕಿತ್ಸಾ ಅಂಗದಲ್ಲಿ ಉದ್ದಾಯನ ರಾಜನು, ನಾಲ್ಕನೆಯ ಅಮೂಢ ದೃಷ್ಟೀ ಅಂಗದಲ್ಲಿ ರೇವತಿರಾಣಿಯು, ಐದನೆಯ ಉಪಗೂಹನ ಅಂಗದಲ್ಲಿ ಜಿನೇಂದ್ರ ಭಕ್ತನು, ಆರನೆಯ ಸ್ಥಿತೀಕರಣ ಅಂಗದಲ್ಲಿ ವಾರಿಷೇಣನು, ಏಳನೆಯ ವಾತ್ಸಲ್ಯ ಅಂಗದಲ್ಲಿ ವಿಷ್ಣುಕುಮಾರನು, ಮತ್ತು ಎಂಟನೆಯ ಪ್ರಭಾವನಾ ಅಂಗದಲ್ಲಿ ವಜ್ರಕುಮಾರನು, ಹೀಗೆ ಪ್ರಖ್ಯಾತರಾದರು.

ನಾಂಗಹೀನಮಲಂ ಛೆತ್ತುಂ
ದರ್ಶನಂ ಜನ್ಮಸಂತತಿಂ ॥
ನಹಿ ಮಂತ್ರೋಕ್ಷನ್ಯೂನೋ
ನಿಹಂತಿ ವಿಷವೇದನಾಂ ॥ ೨೧ ॥

ತಾತ್ಪರ್ಯ—ಅಪೂರ್ಣವಾಗಿರುವ ಅಕ್ಷರಗಳ ಮಂತ್ರದಿಂದ ವಿಷದ ವೇದನೆಗಳು ಹೋಗದಂತೆ ಅಂಗಹೀನ ಸಮ್ಯಗ್ ದರ್ಶನದಿಂದ ಜನ್ಮ ಮರಣ ರೂಪವಾದ ಸಂಸಾರದ ನಾಶವಾಗುವುದಿಲ್ಲ.

ಆಪಗಾಸಾಗಾರಸ್ನಾನ
ಮುಚ್ಚಯಃ ಸಿಕತಾಶ್ಮನಾಂ ॥
ಗಿರಿಪಾತೋಗ್ನಿಪಾತಶ್ಚ
ಲೋಕಮೂಢಂ ನಿಗದ್ಯತೇ ॥ ೨೨ ॥

ತಾತ್ಪರ್ಯ— ಗಂಗಾ, ಭಾಗೀರಥೀ, ಯಮುನಾ, ಚಂದ್ರಭಾಗಾ, ನರ್ಮದಾ ಮುಂತಾದ ನದಿಗಳ ಮತ್ತು ಸಮುದ್ರದ ಸ್ನಾನ ಮಾಡುವುದರಲ್ಲಿ, ಧರ್ಮವನ್ನು ಮನ್ನಿಸುವ, ಉಸುಬಿನ ಮತ್ತು ಕಲ್ಲಿನ ಪಿಂಡಗಳನ್ನುಮಾಡುವ,

ಪರ್ವತಗಳ ಮೇಲಿಂದ ಬೀಳುವ, ಅಗ್ನಿಯಲ್ಲಿ ಸತಿ ಹೋಗುವ ಇತ್ಯಾದಿ ಕೃತ್ಯಗಳಿಗೆ ಲೋಕ ಮೂಢವೆಂದೆನ್ನಬೇಕು.

ವರೋಪಲಿಪ್ಸಯಾಶಾವಾನ್
ರಾಗದ್ವೇಷಮಲೀಮಸಾಃ ॥
ದೇವತಾಯದುಪಾಸೀತ
ದೇವತಾಮೂಢಮುಚ್ಯತೇ ॥ ೨೩ ॥

ತಾತ್ಪರ್ಯ—ಯಾವ ಆಸೆಯುಳ್ಳ ಮನುಷ್ಯನ ವರಪ್ರಾಪ್ತಿಯ ಲೋಭದಿಂದ ರಾಗದ್ವೇಷಗಳಿಂದ ಸಂಯುಕ್ತವಾಗಿರುವ ದೇವತೆಗಳ ಉಪಾಸನೆಯನ್ನು ಮಾಡುತ್ತಾನೆ. ಅವನು ದೇವತಾಮೂಢನು ; ಎಂದು ಅನ್ನುತ್ತಾರೆ.

ಸಂಗ್ರಥಾರಂಭಹಿಂಸಾನಾಂ
ಸಂಸಾರವರ್ತವರ್ತಿನಾಂ ॥
ಪಾಖಂಡಿನಾಂ ಪುರಸ್ಕಾರೋ
ಜ್ಞೇಯಂ ಪಾಖಂಡಿನೋಹನಂ ॥ ೨೪ ॥

ಅರ್ಥ—ಪರಿಗ್ರಹವನ್ನಿಟ್ಟು ಆರಂಭ ಹಿಂಸೆಯನ್ನು ಮಾಡುವ ಮತ್ತು ಸಂಸಾರದ ಭ್ರಮಣದಲ್ಲಿ ಭ್ರಮಿಸುವ, ಇಂಥ ಪಾಖಂಡೀ ಜನರ ಸತ್ಕಾರ ಮಾಡುವುದಕ್ಕೆ ಪಾಖಂಡೀ ಮೂಢವೆಂದು ಅನ್ನುತ್ತಾರೆ.

ಜ್ಞಾನಂ ಪೂಜಾಂ ಕುಲಂ ಜಾತಿಂ
ಬಲಮೃದ್ಧಿಂ ತಪೋ ವಪುಃ ॥
ಅಷ್ಟಾವಾಶ್ರಿತ್ಯ ಮಾನಿತ್ವಂ
ಸ್ಮಯಮಾಹುರ್ಗತಸ್ಮಯಾಃ ॥ ೨೫ ॥

ತಾತ್ಪರ್ಯ—ಜ್ಞಾನ, ಪೂಜಾ, ಕುಲ, ಜಾತಿ, ಬಲ, ಐಶ್ವರ್ಯ, ತಪ ಮತ್ತು ಶರೀರ ಈ ಎಂಟು ಪದಾರ್ಥಗಳ ಆಶ್ರಯದಿಂದ ಗರ್ವವನ್ನು ವಹಿಸುವುದಕ್ಕೆ ಅಷ್ಟಮದವೆಂದು ಗಣಧರರು ಅಂದಿದ್ದಾರೆ.

ಸ್ಮಯೇನ ಯೋನ್ಯಾನತ್ಯೇತಿ
ಧರ್ಮಸ್ಥಾನ್ ಗರ್ವಿತಾಶಯಃ ॥
ಸೋಽತ್ಯೇತಿ ಧರ್ಮಮಾತ್ಮೀಯಂ
ನ ಧರ್ಮೋ ಧಾರ್ಮಿಕೈರ್ವಿನಾ ॥ ೨೬ ॥

ತಾತ್ಪರ್ಯ—ಯಾವ ಗರ್ವಿಷ್ಠ ಮನುಷ್ಯನು ಗರ್ವದಿಂದ ಎರಡನೇ ಧಾರ್ಮಿಕ ಮನುಷ್ಯನ ತಿರಸ್ಕಾರವನ್ನು ಮಾಡುತ್ತಾನೆ, ಅವನು ಸ್ವಂತ ಧರ್ಮವನ್ನು ತಿರಸ್ಕರಿಸುತ್ತಾನೆ. ಯಾಕೆಂದರೆ ಧಾರ್ಮಿಕನನ್ನು ಬಿಟ್ಟು ಧರ್ಮವಿಲ್ಲ.

ಯದಿ ಪಾಪನಿರೋಧೋನ್ಯ
ಸಂಪದಾ ಕಿಂ ಪ್ರಯೋಜನಂ ॥
ಅಥ ಪಾಪಾಶ್ರವೋಸ್ತ್ಯನ್ಯ
ಸಂಪದಾ ಕಿಂ ಪ್ರಯೋಜನಂ ॥ ೨೭ ॥

ತಾತ್ಪರ್ಯ—ಪಾಪದ ನಿರೋಧವು ಮಾಡಲ್ಪಟ್ಟದ್ದರೆ ಐಶ್ವರ್ಯಾದಿ ಇತರ ಸಂಪತ್ತಿಯನ್ನಾದರೂ ತೆಗೆದುಕೊಂಡು ಏನು ಮಾಡಬೇಕು ? ಮತ್ತು ಪಾಪಗಳ ಆಶ್ರಯವನ್ನು ಮಾಡಿಕೊಂಡಿದ್ದರೆ ಐಶ್ವರ್ಯಾದಿ ಅನ್ಯಸಂಪತ್ತಿಯು ಇದ್ದು ಫಲವೇನು ?

ಸಮ್ಯಗ್ದರ್ಶನಸಂಪನ್ನ
ಮಪಿ ಮಾತಂಗದೇಹಜಂ ॥
ದೇವಾ ದೇವಂ ವಿದುರ್ಭಸ್ಮ
ಗೂಢಾಂಗಾರಾಂತರೌಜಸಂ ॥ ೨೮ ॥

ತಾತ್ಪರ್ಯ — ಚಾಂಡಾಲರ ಹೊಟ್ಟೆಯಲ್ಲಿ ಉತ್ಪನ್ನನಾದವನಾಗಿದ್ದರೂ ಅವನು ಸಮ್ಯಗ್ದರ್ಶನ ಸಂಯುಕ್ತನಾಗಿದ್ದರೆ ಅವನು ದೇವತೆಯೆಂದೂ ಗಣಧರಾದಿಕರು ತಿಳಿಯುತ್ತಾರೆ. ಇದಕ್ಕೆ ದೃಷ್ಟಾಂತವು :— ಬೂದಿಯಲ್ಲಿ ಮುಚ್ಚಿದ್ದ ಅಗ್ನಿಯಾದರೂ ತೇಜವುಳ್ಳದ್ದಾಗಿಯೇ ಇರುತ್ತದೆ.

ಶ್ವಾಪಿ ದೇವೋಽಪಿ ದೇವಃ ಶ್ವಾ
ಜಾಯತೇ ಧರ್ಮಕಿಲ್ಬಿಷಾತ್ ॥
ಕಾಪಿ ನಾಮ ಭವೇದನ್ಯಾ
ಸಂಪದ್ಧರ್ಮಾಚ್ಛರೀರಿಣಾಂ ॥ ೨೯ ॥

ತಾತ್ಪರ್ಯ—ಧರ್ಮವನ್ನು ಅನುಸರಿಸುವುದರಿಂದ ನಾಯಿಯು ಸಹ ದೇವತ್ವವನ್ನು ಹೊಂದುತ್ತದೆ ; ಮತ್ತು ಪಾಪಾಚರಣದಿಂದ ದೇವತೆಯು ಸಹ ನಾಯಿಯಾಗುತ್ತಾನೆ. ದೇಹಧಾರೀ ಜೀವನಿಗೆ ಧರ್ಮವಲ್ಲದೆ ಬೇರೆ ಬೇರಾದ ಸಂಪದವು ಪ್ರಾಪ್ತವಾಗುತ್ತದೆ. ತಾತ್ಪರ್ಯವೇನೆಂದರೆ ಧರ್ಮವೇ ನಿಜವಾದ ಸಂಪತ್ತು.

ಭಯಾಶಾಸ್ನೇಹಲೋಭಾಚ್ಚ
ಕುದೇವಾಗಮಲಿಂಗಿನಾಂ ॥
ಪ್ರಣಾಮಂ ವಿನಯಂ ಚೈವ
ನ ಕುರ್ಯುಃ ಶುದ್ಧದೃಷ್ಟಯಃ ॥ ೩೦ ॥

ತಾತ್ಪರ್ಯ—ಸಮ್ಯಗ್ದೃಷ್ಟಿಯುಳ್ಳ ಪುರುಷನು ಆಸೆಯಿಂದಾಗಲೀ ಭಯದಿಂದಾಗಲೀ ಸ್ನೇಹದಿಂದಾಗಲೀ ಇಲ್ಲವೆ ಲೋಭದಿಂದಾಗಲೀ, ಕುದೇವ, ಕುಗುರು ಮತ್ತು ಕುಶಾಸ್ತ್ರ ಇವುಗಳಿಗೆ ವಂದಿಸಬಾರದು ಮತ್ತು ಇವುಗಳ ಸತ್ಕಾರವನ್ನು ಮಾಡಬಾರದು.

ದರ್ಶನಂ ಜ್ಞಾನಚಾರಿತ್ರಾತ್
ಸಾಧಿಮಾನಮುಪಾಶ್ನುತೇ ॥
ದರ್ಶನಂ ಕರ್ಣಧಾರಂ ತ
ನ್ಮೋಕ್ಷಮಾರ್ಗೇ ಪ್ರಚಕ್ಷತೇ ॥ ೩೧ ॥

ತಾತ್ಪರ್ಯ—ಜ್ಞಾನ ಮತ್ತು ಚಾರಿತ್ರ ಇವುಗಳಿಗಿಂತ ಸಮ್ಯಗ್ದರ್ಶನವು ಶ್ರೇಷ್ಠವಾದುದ್ದು. ಮೋಕ್ಷಮಾರ್ಗದಲ್ಲಿ ಸಮ್ಯಗ್ದರ್ಶನವು ನಾವಿಕನೆಂದು ತಿಳಿಯಲ್ಪಡುತ್ತದೆ.

ವಿದ್ಯಾವೃತ್ತಸ್ಯ ಸಂಭೂತಿ
ಸ್ಥಿತಿವೃದ್ಧಿ ಫಲೋದಯಾಃ ॥
ನ ಸಂತ್ಯಸತಿ ಸಮ್ಯಕ್ತ್ವೇ
ಬೀಜಾಭಾವೇ ತರೋರಿವ ॥ ೩೨ ॥

ತಾತ್ಪರ್ಯ—ಬೀಜವು ಇಲ್ಲದಿದ್ದರೆ ವೃಕ್ಷದ ಉತ್ಪತ್ತಿ, ಸ್ಥಿತಿ, ವೃದ್ಧಿ ಮತ್ತು ಫಲ ಇವು ಹೇಗೆ ಆಗುವುದಿಲ್ಲವೋ ಅದೇ ಪ್ರಕಾರ ಸಮ್ಯಕ್ತ್ವವಿಲ್ಲದಿದ್ದರೆ ಜ್ಞಾನ, ಚಾರಿತ್ರ ಇವುಗಳ ಉತ್ಪತ್ತಿ, ಸ್ಥಿತಿ, ವೃದ್ಧಿ, ಮತ್ತು ಫಲೋದಯ ಇವು ಆಗುವುದಿಲ್ಲ.

ಗೃಹಸ್ಥೋ ಮೋಕ್ಷಮಾರ್ಗಸ್ಥೋ
ನಿರ್ಮೋಹೋ ನೈವ ಮೋಹವಾನ್ ॥
ಅನಗಾರೋ ಗೃಹೀ ಶ್ರೇಯಾನ್
ನಿರ್ಮೋಹೋ ಮೋಹಿನೋ ಮುನೇಃ ॥ ೩೩

ತಾತ್ಪರ್ಯ— ಮೋಹವನ್ನು ಬಿಟ್ಟ ಗೃಹಸ್ಥನಾದರೂ ಮೋಕ್ಷಮಾರ್ಗದಲ್ಲಿರುತ್ತಾನೆ. ಆದರೆ ಮೋಹವಾನ ಮುನಿಯು ಮೋಕ್ಷಮಾರ್ಗದಲ್ಲಿ ಇರುವುದಿಲ್ಲ. ಇದರ ತಿಳಿಯತಕ್ಕದ್ದೇನೆಂದರೆ, ಮೋಹವುಳ್ಳ ಮುನಿಗಿಂತ ಮೋಹರಹಿತನಾದ ಗೃಹಸ್ಥನು ಶ್ರೇಷ್ಠ.

ನ ಸಮ್ಯಕ್ತ್ವಸಮಂ ಕಿಂಚಿತ್
ತ್ರೈಕಾಲ್ಯೇ ತ್ರಿಜಗತ್ಯಪಿ ॥
ಶ್ರೇಯೋಽಶ್ರೇಯಶ್ಚ ಮಿಥ್ಯಾತ್ವ
ಸಮಂ ನಾನ್ಯತ್ತನೂಭೃತಾಮ್ ॥ ೩೪ ॥

ತಾತ್ಪರ್ಯ—ಪ್ರಾಣಿಮಾತ್ರಕ್ಕೆ ಸಮ್ಯಕ್ತ್ವವಲ್ಲದೆ ಕಲ್ಯಾಣದಾಯಕವಾದ ಬೇರೆ ಪದಾರ್ಥವು ಈ ತ್ರೈಲೋಕದಲ್ಲಿ ತ್ರಿಕಾಲದಲ್ಲಿ ಇಲ್ಲ. ಮತ್ತು ಮಿಥ್ಯತ್ವದ ಹಾಗೆ ಅಹಿತ ಮಾಡುವ ಅನ್ಯಪದಾರ್ಥವೂ ಬೇರೆ ಇಲ್ಲ.

ಸಮ್ಯಗ್ದರ್ಶನಶುದ್ಧಾ
ನಾರಕತಿರ್ಯಙ್ನಪುಂಸಕಸ್ತ್ರೀತ್ವಾನಿ ॥
ದುಷ್ಕುಲವಿಕೃತಾಲ್ಪಾಯು
ದರಿದ್ರತಾಂ ಚ ವ್ರಜಂತಿನಾಪ್ಯವ್ರತಿಕಾಃ ॥ ೩೫ ॥

ತಾತ್ಪರ್ಯ—ಯಾರ ಸಮ್ಯಗ್ದರ್ಶನತ್ವವು ಶುದ್ಧವಿರುವುದೋ ಅವರು ವ್ರತರಹಿತರಾಗಿದ್ದರೂ ಅವರಿಗೆ ನರಕಗತಿ, ತಿರ್ಯಂಚಗತಿ, ನಪುಂಸತ್ವ, ಸ್ತ್ರೀತ್ವ, ದುಷ್ಕಾಲದಲ್ಲಿ ಜನ್ಮತಾಳೋಣ, ವಿದ್ರೂಪವಾಗೋಣ, ಅಲ್ಪಾಯುತ್ವ ದಾರಿದ್ರ್ಯ ಮುಂತಾದ ಸಂಗತಿಗಳು ಸಂಭವಿಸುವುದಿಲ್ಲ.

ಓಜಸ್ತೇಜೋವಿದ್ಯಾ
ವೀರ್ಯಯಶೋವೃದ್ಧಿ ವಿಜಯವಿಭವಸನಾಥಃ
ಮಹಾಕುಲಾ ಮಹಾರ್ಥಾ
ಮಾನವತಿಲಕಾ ಭವಂತಿ ದರ್ಶನಪೂತಾಃ ॥ ೩೬ ॥

ತಾತ್ಪರ್ಯ—ಸಮ್ಯಗ್ದೃಷ್ಟಿಯುಳ್ಳ ಜೀವಗಳು ಶಕ್ತಿ, ತೇಜಸ್ಸು, ವಿದ್ವತ್ತು ಪರಾಕ್ರಮ, ಕೀರ್ತಿ, ಕುಟುಂಬವತ್ಸಲತೆ, ವೃದ್ಧಿಂಗತವಾಗುವ ವೈಭವ, ವಿಜಯ, ಕುಲೀನತೆ, ಐಶ್ವರ್ಯ ಮುಂತಾದ ಗುಣಗಳಿಂದ ಯುಕ್ತವಾಗಿ ಎಲ್ಲ ಮನುಷ್ಯರಲ್ಲಿ ಶ್ರೇಷ್ಠತೆಯನ್ನು ಹೊಂದುತ್ತವೆ.

ಅಷ್ಟಗುಣಪುಷ್ಟಿತುಷ್ಟಾ
ದೃಷ್ಟಿವಿಶಿಷ್ಟಾಃ ಪ್ರಕೃಷ್ಟಶೋಭಾಜುಷ್ಟಾಃ ॥
ಅಮರಾಪ್ಸರಸಾಂ ಪರಿಷದಿ
ಚಿರಂ ರಮಂತೆ ಜಿನೇಂದ್ರ ಭಕ್ತಾಃಸ್ವರ್ಗೇ ॥ ೩೭ ॥

ತಾತ್ಪರ್ಯ—ಸಮ್ಯಕ್ತ್ವದಿಂದ ಯುಕ್ತರಾದ ಜಿನೇಂದ್ರ ಭಕ್ತರು, ಸ್ವರ್ಗದಲ್ಲಿಯ ದೇವದೇವಾಂಗನೆಯರ ಸಭೆಯಲ್ಲಿ ಚಿರಕಾಲ ರಮಮಾಣರಾಗುತ್ತಾರೆ. ಅವರು ಎಂಟು ಋದ್ಧಿಗಳ ಪುಷ್ಟಿಯಿಂದ ಸಂತುಷ್ಟರಾಗಿ, ಉತ್ಕೃಷ್ಟ ಶೋಭಾಯಮಾನವಾಗುತ್ತಾರೆ.

ನವನಿಧಿಸಪ್ತದ್ವಯ
ರತ್ನಾಧೀಶಾಃ ಸರ್ವಭೂಮಿಪತಯಶ್ಚಕ್ರಂ ।
ವರ್ತಯಿತುಂ ಪ್ರಭವಂತಿ
ಸ್ಪಷ್ಟದೃಶಃಕ್ಷತ್ರಮೌಲಿಶೇಖರಚರಣಾಃ ॥ ೩೮ ॥

ತಾತ್ಪರ್ಯ—ಸಮ್ಯಗ್ದೃಷ್ಟಿಯುಳ್ಳ ಜೀವಗಳು, ಒಂಭತ್ತು ನಿಧಿ ಮತ್ತು ಹದಿನಾಲ್ಕು ರತ್ನಗಳ ಒಡೆಯರೂ ಸಂಪೂರ್ಣ ಪೃಥ್ವಿಯ ಅಧಿಪತಿಗಳೂ, ಚಕ್ರವರ್ತಿಗಳ ಚಕ್ರಗಳನ್ನು ನಡಿಸೂವಂಥವರೂ, ಆಗುತ್ತಾರೆ. ಮುಕುಟ ಬಂಧರಾಜರು ಅವರ ಚರಣಗಳ ಮೇಲೆ ಮಸ್ತಕಗಳನ್ನಿಕ್ಕುತ್ತಾರೆ.

ಅಮರಾಸುರನರಪತಿಭಿ
ರ್ಯಮಧರಪತಿಭಿಶ್ಚ ನೂತಪಾದಾಂಭೋಜಾಃ ।
ದೃಷ್ಟ್ಯಾ ಸುನಿಶ್ಚಿತಾರ್ಥಾ
ನೃಷಚಕ್ರಧರಾ ಭವಂತಿ ಲೋಕಶರಣ್ಯಾಃ ॥ ೩೯ ॥

ತಾತ್ಪರ್ಯ—ಯಾವ ತೀರ್ಥಕಂರರ ಚರಣ ಕಮಲಗಳಿಗೆ ಸ್ವರ್ಗದಲ್ಲಿರತಕ್ಕ ದೇವತೆಗಳೂ ಪಾತಾಲದಲ್ಲಿರತಕ್ಕ ಅಸುರರೂ, ಭೂಮಿಯಲ್ಲಿತರಕ್ಕ ಚಕ್ರವರ್ತಿಗಳೂ, ಗಣಧರ ದೇವತೆಗಳೂ ನಮಸ್ಕರಿಸುವರೋ, ಯಾರಿಗೆ ಎಲ್ಲ ಲೋಕವು ಶರಣು ಹೋಗುವುದೋ, ಮತ್ತು ಯಾರು ಪದಾರ್ಥಗಳ ನಿಶ್ಚಯವನ್ನು ಚನ್ನಾಗಿ ಅರ್ಥೈಸಿರುವಂತ ಅಂಥ ತೀರ್ಥಂಕರರ ಪದವಿಯು ಸಮ್ಯಗ್ದರ್ಶನದಿಂದ ಪ್ರಾಪ್ತವಾಗುತ್ತದೆ.

ಶಿವಮಜರಮರುಜಮಕ್ಷಯ
ಮವ್ಯಾಬಾಧಂ ವಿಶೋಕಭಯಶಂಕಂ ॥
ಕಾಷ್ಠಾಗತಸುಖವಿದ್ಯಾ
ವಿಭವಂ ವಿಮಲಂ ಭಜಂತಿ ದರ್ಶನಶರಣಾಃ ॥ ೪೦ ॥

ತಾತ್ಪರ್ಯ—ಸಮ್ಯಗ್ದೃಷ್ಟಿಯುಳ್ಳ ಜೀವಗಳಿಗೆ ರೋಗರಹಿತ, ಜರಾ ರಹಿತ, ನಾಶರಹಿತ, ಪ್ರತಿಬಂಧರಹಿತ, ಶೋಕರಹಿತ, ನಿರ್ಭಯ, ನಿಃಶಂಕ, ನಿರ್ಮಲ ಅನಂತಸುಖ, ಅನಂತಜ್ಞಾನರೂಪ, ವೈಭಯುಕ್ತ ಲಕ್ಷಣಗಳುಳ್ಳ ಮೋಕ್ಷವು ಪ್ರಾಪ್ತವಾಗುತ್ತದೆ.

ದೇವೇಂದ್ರಚಕ್ರಮಹಿಮಾನಮಮೇಯಮಾನಂ
ರಾಜೇಂದ್ರಚಕ್ರಮವನೀಂದ್ರಿಶಿರೋರ್ಚನೀಯಂ
ಧರ್ಮೇಂದ್ರಚಕ್ರಮಧರೀಕೃತಸರ್ವಲೋಕಂ
ಲಬ್ಧ್ವಾ ಶಿವಂ ಚ ಜಿನಭಕ್ತಿರುಪೈತಿ ಭವ್ಯಃ ॥ ೪೧ ॥

ತಾತ್ಪರ್ಯ—ಜಿನ ಭಕ್ತಿಯಲ್ಲಿ ತತ್ಪರವಾಗಿದ್ದ ಭವ್ಯ ಜೀವವು ಇಂದ್ರ ಪದದ ಅಗಣ್ಯ ವೈಭವನ್ನು ಹೊಂದಿ ಪೃಥ್ವಿಗೆ ವಂದ್ಯವಾಗಿದ್ದ ರಾಜ್ಯವಿಭೂತಿ ಯನ್ನು ಭೋಗಿಸಿ, ಸರ್ವಲೋಕದಲ್ಲಿ ಶ್ರೇಷ್ಠವಾದ ತೀರ್ಥಂಕರರ ಪದವಿ ಯನ್ನು ಭೋಗಿಸಿ ಮೋಕ್ಷವನ್ನು ಹೊಂದುತ್ತದೆ.

॥ ಇತಿ ಶ್ರೀ ಸಮಂತಭದ್ರಸ್ವಾಮಿ ವಿರಚಿತೇ ರತ್ನಕರಂಡನಾಮ್ನಿ ಉಪಾಸಕಾಧ್ಯಯನೇ ಸಮ್ಯಗ್ದರ್ಶನ ವರ್ಣನಂ ನಾಮ ಪ್ರಥಮ ಪರಿಚ್ಛೇದಃ ॥

ಅನ್ಯೂನಮನತಿರಿಕ್ತಂ
ಯಾಥಾತಥ್ಯಂ ವಿನಾ ಚ ವಿಪರೀತಾತ್ ॥
ನಿಸ್ಸಂದೇಹಂ ವೇದ ಯ
ದಾಹುಸ್ತಜ್ಜ್ಞಾನಮಾಗಮಿನಃ ॥ ೪೨ ॥

ತಾತ್ಪರ್ಯ—ನ್ಯೂನತೆ, ಅಧಿಕತೆ, ವಿಪರೀತತೆ, ಸಂಶಯ ಇವುಗಳಿಂದ ರಹಿತವಾಗಿ, ಯಥಾರ್ಥವಾಗಿ ತಿಳಿದುಕೊಳ್ಳುವುದಕ್ಕೆ ಸಮಾಜ್ಞರು ಜ್ಞಾನ ವೆಂದೆನ್ನುತ್ತಾರೆ.

ಪ್ರಥಮಾನುಯೋಗಮರ್ಥಾ
ಖ್ಯಾನಂ ಚರಿತಂ ಪುರಾಣಮಪಿ ಪುಣ್ಯಂ ||
ಬೋಧಿಸಮಾಧಿನಿಧಾನಂ
ಬೋಧತಿ ಬೋಧಃ ಸಮೀಚೀನಃ || ೪೩ ||

ತಾತ್ಪರ್ಯ—ಯಾವುದರಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ನಾಲ್ಕೂ ಪುರುಷಾರ್ಥಗಳ ವ್ಯಾಖ್ಯಾನವಿದ್ದು, ಅರವತ್ತಮೂರು ಶಲಾಕಾ ಪುರುಷರ ಪುರಾಣಗಳೂ ಪ್ರತಿಯೊಬ್ಬರ ಚರಿತ್ರಗಳೂ ಇರುತ್ತವೆ. ಮತ್ತು ಯಾವುದನ್ನು ಕೇಳುವುದರಿಂದ ಪುಣ್ಯವು ಲಭಿಸುತ್ತದೆ, ಯಾವುದು ರತ್ನತ್ರಯ ಮತ್ತು ಸಮಾಧಿ ಇವುಗಳ ಸ್ಥಾನವಾಗಿದೆ, ಅದಕ್ಕೆ ಸಮ್ಯಕ್‌ಜ್ಞಾನವು ಪ್ರಥಮಾನುಯೋಗವೆಂದು ಕರೆಯುತ್ತದೆ.

ಲೋಕಾಲೋಕವಿಭಕ್ತೇ
ರ್ಯುಗಪರಿವೃತ್ತೇಶ್ಚತುರ್ಗತೀನಾಂ ಚ ||
ಆದರ್ಶಮಿವ ತಥಾಮತಿ
ರವೈತಿ ಕರಣಾನುಯೋಗಂ ಚ || ೪೪ ||

ತಾತ್ಪರ್ಯ—ಯಾವುದರಲ್ಲಿ ಲೋಕ ಮತ್ತು ಅಲೋಕ ಇವು ಭೇದ ರೂಪದಿಂದ ವರ್ಣಿಸಲ್ಪಟ್ಟವೆ, ಯಾತರಲ್ಲಿ ಉತ್ಸರ್ಪಿಣೀ ಮತ್ತು ಅವಸರ್ಪಿಣೀ ಕಾಲಗಳ ಪರಿವರ್ತನದ ಮತ್ತು ನಾಲ್ಕು ಗತಿಗಳ ಪರಿವರ್ತನದ ಸ್ಪಷ್ಟ ವರ್ಣನವು ಕನ್ನಡಿಯಂತೆ ಮಾಡಲ್ಪಟ್ಟದೆ, ಅದಕ್ಕೆ ಜ್ಞಾನವು ಕರಣಾನು ಯೋಗವೆಂದು ತಿಳಿದಿರುತ್ತದೆ.

ಗೃಹಮೇಧ್ಯನಗಾರಾಣಾಂ
ಚಾರಿತ್ರೋತ್ಪತ್ತಿವೃದ್ಧಿರಕ್ಷಾಂಗಂ ||
ಚರಣಾನುಯೋಗಸಮಯಂ
ಸಮ್ಯಗ್‌ಜ್ಞಾನಂ ವಿಜಾನಾತಿ || ೪೫ ||

ತಾತ್ಪರ್ಯ—ಯಾವುದರಲ್ಲಿ ಗೃಹಸ್ಥ ಮತ್ತು ಮುನಿ ಇವರ ಆಚರಣಗಳ ಉತ್ಪತ್ತಿ, ವೃದ್ಧಿ ಮತ್ತು ರಕ್ಷಣೆಯ ಕಾರಣವು ವರ್ಣಿಸಲ್ಪಟ್ಟಿರುವುದೋ ಅದು ಚರಣಾನುಯೋಗದ ಶಾಸ್ತ್ರವೆಂದು ಸಮ್ಯಕ್‌ಜ್ಞಾನವು ಹೇಳುತ್ತದೆ.

ಜೀವಾಜೀವಸುತತ್ವೇ
ಪುಣ್ಯಾಪುಣ್ಯೆ ಚ ಬಂಧಮೋಕ್ಷೌ ಚ ||
ದ್ರವ್ಯಾನುಯೋಗದೀಪಃ
ಶ್ರುತವಿದ್ಯಾಲೋಕಮಾತನುತೇ || ೪೬ ||

ತಾತ್ಪರ್ಯ— ದ್ರವ್ಯಾನುಯೋಗರೂಪವಾದ ದೀಪವು ಜೀವ ಮತ್ತು ಅಜೀವ ಈ ಉತ್ತಮ ತತ್ವಗಳಲ್ಲಿಯೂ ಅದೇ ಪ್ರಕಾರವಾಗಿ ಪುಣ್ಯ ಹಾಗೂ ಪಾಪಬಂಧ ಹಾಗೂ ಮೋಕ್ಷ ಇವುಗಳಲ್ಲಿ ಜ್ಞಾನದ ಪ್ರಕಾಶವನ್ನು ಹೆಚ್ಚು ಮಾಡುತ್ತದೆ.

|| ಇತಿ ಶ್ರೀ ಸಮಂತಭದ್ರಸ್ವಾಮಿ ವಿರಚಿತೇ ರತ್ನಕರಂಡ ನಾಮ್ನಿ ಉಪಾಸಕಾಧ್ಯಯನೇ ಸಮ್ಯಗ್‌ಜ್ಞಾನವರ್ಣನಂ ನಾಮ ದ್ವಿತೀಯ ಪರಿಚ್ಛೇದಃ ||

ಮೋಹತಿಮಿರಾಪಹರಣೇ
ದರ್ಶನಲಾಭಾದವಾಪ್ತಸಂಜ್ಞಾನಃ ||
ರಾಗದ್ವೇಷನಿವೃತ್ತ್ಯೈ
ಚರಣಂ ಪ್ರತಿಪದ್ಯತೇ ಸಾಧುಃ || ೪೭ ||

ತಾತ್ಪರ್ಯ—ಯಾವ ಭವ್ಯಜೀವದ ಮೋಹರೂಪವಾದ ಅಂಧಕಾರವು ನಾಶವಾಗುತ್ತದೆ ಅದಕ್ಕೆ ಸಮ್ಯಕ್‌ದರ್ಶನದ ಲಾಭವಾಗುವ ಕಾಲಕ್ಕೆ, ಆದರ ಜ್ಞಾನವಾದರೂ ಸಮ್ಯಕ್ತ್ವವನ್ನು ಹೊಂದುತ್ತದೆ. ಆಮೇಲೆ ಅದು ರಾಗದ್ವೇಷಗಳನ್ನು ಕಳೆದುಕೊಳ್ಳುವುದಕ್ಕಾಗಿ ಚಾರಿತ್ರದ ಅಂಗೀಕಾರ ಮಾಡುತ್ತದೆ.

ರಾಗದ್ವೇಷನಿವೃತ್ತೇ
ರ್ಹಿಂಸಾದಿನಿವರ್ತನಾ ಕೃತಾ ಭವತಿ ||
ಅನಪೇಕ್ಷಿತಾರ್ಥವೃತ್ತಿಃ
ಕಃ ಪುರುಷಃ ಸೇವತೇ ನೃಪತೀನ್ || ೪೮ ||

ತಾತ್ಪರ್ಯ—ರಾಗದ್ವೇಷಗಳು ಇಲ್ಲದ ಹಾಗೆ ಆದವೆಂದರೆ ಹಿಂಸಾದಿ ಪಂಚಪಾತಕಗಳ ಅಭಾವವು ಪೂರ್ಣವಾಗಿ ಆಗುತ್ತದೆ. ಇದಕ್ಕೆ ದೃಷ್ಟಾಂತವು ದ್ರವ್ಯದ ಇಚ್ಛೆಯಿಲ್ಲದಂಥ ಯಾವ ಪುರುಷನು ರಾಜನನ್ನು ಸೇವಿಸುವನು ?

ಹಿಂಸಾನೃತಚೌರ್ಯೇಭ್ಯೋ
ಮೈಥುನಸೇವಾಪರಿಗ್ರಹಾಭ್ಯಾಂ ಚ ||
ಪಾಪಪ್ರಣಾಲಿಕಾಭ್ಯೋ
ವಿರತಿಃ ಸಂಜ್ಞಸ್ಯ ಚಾರಿತ್ರಂ || ೪೯ ||

ತಾತ್ಪರ್ಯ—ಹಿಂಸೆ, ಸುಳ್ಳು, ಕಳ್ಳತನ, ಮೈಥುನ, ಪರಿಗ್ರಹ ಇವು ಪಾತಕಗಳ ಹರಿನಾಲಿಗೆಗಳಾಗಿವೆ. ಸಮ್ಯಕ್‌ಜ್ಞಾನಿಯಾದ ಪುರುಷರು ಇವುಗಳ ತ್ಯಾಗಮಾಡುವದಕ್ಕೆ ಚಾರಿತ್ರವೆಂದೆನ್ನುತ್ತಾರೆ.

ಸಕಲಂ ವಿಕಲಂ ಚರಣಂ
ತತ್ಸಕಲಂ ಸರ್ವಸಂಗವಿರತಾನಾಂ ॥
ಅನಗಾರಾಣಾಂ ವಿಕಲಂ
ಸಾಗಾರಾಣಾಂ ಸಸಂಗಾನಾಂ ॥೫೦॥

ತಾತ್ಪರ್ಯ—ಚಾರಿತ್ರದ ಎರಡು ಭೇದಗಳಿವೆ. ೧ ಸಕಲಚಾರಿತ್ರ ೨ ವಿಕಲಚಾರಿತ್ರ. ಸಕಲ ಚಾರಿತ್ರವು, ಸಂಪೂರ್ಣ ಪರಿಗ್ರಹವನ್ನು ಬಿಟ್ಟು ಬಿಡುವ ಮುನಿಗೆ ಪ್ರಾಪ್ತವಾಗುತ್ತದೆ. ಮತ್ತು ವಿಕಲ ಚಾರಿತ್ರವು ಪರಿಗ್ರಹ ಧಾರಿಯಾದ ಗೃಹಸ್ಥಾಶ್ರಮದಲ್ಲಿರುವ ಶ್ರಾವಕನಿಗೆ ಪ್ರಾಪ್ತವಾಗುತ್ತದೆ.

ಗೃಹಿಣಾಂ ತ್ರೇಧಾ ತಿಷ್ಠ
ತ್ಯಣುಗುಣಶಿಕ್ಷಾವ್ರತಾತ್ಮಕಂ ಚರಣಂ ॥
ಪಂಚತ್ರಿಚತುರ್ಭೇದಂ
ತ್ರಯಂ ಯಥಾಸಂಖ್ಯಮಾಖ್ಯಾತಂ ॥ ೫೧ ॥

ತಾತ್ಪರ್ಯ—ಗೃಹಸ್ಥರ ಚಾರಿತ್ರವು ಮೂರು ಪ್ರಕಾರದ್ದಾಗಿದೆ. ಅಣುವ್ರತ, ಗುಣವ್ರತ, ಹಾಗೂ ಶಿಕ್ಷಾವ್ರತ. ಅಣುವ್ರತದಲ್ಲಿ ಐದು ಭೇದಗಳು ; ಗುಣವ್ರತದಲ್ಲಿ ಮೂರು ; ಹಾಗೂ ಶಿಕ್ಷಾವ್ರತದಲ್ಲಿ ನಾಲ್ಕು ; ಹೀಗೆ ಒಟ್ಟು ೧೨ ಭೇದಗಳುಂಟು.

ಪ್ರಾಣಾತಿಪಾತವಿತಥ
ವ್ಯಾಹಾರಸ್ತೇಯಕಾಮಮೂರ್ಚ್ಛೇಭ್ಯಃ ॥
ಸ್ಥೂಲೇಭ್ಯಃ ಪಾಪೇಭ್ಯೋ
ವ್ಯುಪರಮಣಮಣುವ್ರತಂ ಭವತಿ ॥ ೫೨ ॥

ತಾತ್ಪರ್ಯ—ಹಿಂಸೆ, ಮೋಸತನ, ಕಳವು, ಮೈಥುನ, ಪರಿಗ್ರಹ ಈ ಪಾತಕಗಳ ತ್ಯಾಗವನ್ನು ಸ್ಥೂಲತನದಿಂದ ಮಾಡುವುದಕ್ಕೆ ಅಣುವ್ರತವೆಂದೆನ್ನುತ್ತಾರೆ.

ಸಂಕಲ್ಪಾತ್ಕೃತಕಾರಿತ
ಮನನಾದ್ಯೋಗತ್ರಯಸ್ಯ ಚರಸತ್ವಾನ್ ॥
ನ ಹಿನಸ್ತಿ ಯತ್ತದಾಹುಃ
ಸ್ಥೂಲವಧಾದ್ವಿರಮಣಂ ನಿಪುಣಾಃ ॥ ೫೩ ॥

ತಾತ್ಪರ್ಯ—ಮನ, ವಚನ, ದೇಹ ಈ ಮೂರೂ ಯೋಗಗಳ ಸಂಕಲ್ಪದಿಂದ ಮತ್ತು ಕೃತಕಾರಿತ, ಅನುಮೋದನದಿಂದ ತ್ರಸ್ತನಾದ ಜೀವನಿಗೆ ಹೊಡೆಯದೆ ಇರುವುದಕ್ಕೆ ಸ್ಥೂಲ ಹಿಂಸಾತ್ಯಾಗವೆಂದು ನಿಪುಣಪುರುಷರು ಎನ್ನುತ್ತಾರೆ.

ಛೇದನಬಂಧನಪೀಡನ
ಮತಿಭಾರಾರೋಪಣಂ ವ್ಯತೀಚಾರಾಃ ।
ಅಹಾರವಾರಣಾಪಿ ಚ
ಸ್ಥೂಲವಧಾದ್ವ್ಯುಪರತೇಃ ಪಂಚ ॥ ೫೪ ॥

ತಾತ್ಪರ್ಯ—ಅವಯುವಗಳನ್ನು ಛೇದಿಸೋಣ, ಪ್ರತಿಬಂಧದಲ್ಲಿ ಇಡೋಣ, ಪೀಡೆಯನ್ನು ಮಾಡೋಣ, ಮಿತಿಯನ್ನು ಮೀರಿ ಭಾರವನ್ನು ಹೊರಿಸೋಣ, ಮತ್ತು ಅಶನಪಾನಕ್ಕೆ ಪ್ರತಿಬಂಧ ಮಾಡೋಣ ಇವು ಸ್ಥೂಲ ಹಿಂಸೆಯ ತ್ಯಾಗದ ಐದು ಅತಿಚಾರಗಳಾಗಿವೆ.

ಸ್ಥೂಲಿಮಲೀಕಂ ನ ವದತಿ
ನ ಪರಾನ್ ವಾದಯತಿ ಸತ್ಯಮಪಿ ವಿಪದೇ ॥
ಯತ್ತದ್ವದಂತಿ ಸಂತಃ
ಸ್ಥೂಲಮೃಷಾವಾದವೈರಮಣಂ ॥ ೫೫ ॥

ತಾತ್ಪರ್ಯ—ಸ್ಥೂಲವು ಸ್ವಂತ ಅಸತ್ಯವನ್ನಾಡುವುದಿಲ್ಲ ; ಪರರ ಕಡೆಯಿಂದ ಮಾತಾಡಿಸುವುದಿಲ್ಲ ; ಅದೇ ಮೇರೆಗೆ ಯಾವ ಸತ್ಯಭಾಷಣದಿಂದ ಸಂಕಟವು ಒದಗುವುದೊ ಅಂಥ ಸತ್ಯವನ್ನಾದರೂ ಸ್ವಂತ ಮಾತಾಡುವುದಿಲ್ಲ ; ಮತ್ತು ಅನ್ಯರ ಕಡೆಯಿಂದ ಮಾತಾಡಿಸುವುದಿಲ್ಲ. ಇದಕ್ಕೆ ಸತ್ಪುರುಷರು ಸ್ಥೂಲ ಅಸತ್ಯ ಭಾಷಣತ್ಯಾಗವೆಂದೆನ್ನುತ್ತಾರೆ.

ಪರಿವಾದರಹೋಭ್ಯಾಖ್ಯಾ
ಪೈಶೂನ್ಯಂ ಕೂಟಲೇಖಕರಣಂ ಚ ॥
ನ್ಯಾಸಾಪಹಾರಿತಾಪಿ ಚ
ವ್ಯತಿಕ್ರಮಾಃ ಪಂಚ ಸತ್ಯಸ್ಯ ॥ ೫೬ ॥

ತಾತ್ಪರ್ಯ—ಮಿಥ್ಯಾ ಉಪದೇಶವನ್ನು ಮಾಡುವುದು; ಗುಪ್ತಸಂಗತಿಗಳನ್ನು ಪ್ರಸಿದ್ಧಮಾಡುವುದು; ಚಾಡಿಯನ್ನು ಹೇಳುವುದು; ಸುಳ್ಳು ಅಭಿಪ್ರಾಯವನ್ನು ಬರೆಯುವುದು, ಮತ್ತು ಯಾರಾದರೂ ಇಟ್ಟದ್ರವ್ಯಮರೆತು, ಕಡಿಮೆ

ಬೇಡಿದರೆ ಅದನ್ನು ಅಷ್ಟು ಕಡಿಮೆ ಹೇಳುವುದು ; ಇವು ಐದು ಸತ್ಯವ್ರತದ ಅತಿಚಾರಗಳಾಗಿವೆ.

ನಿಹಿತಂ ವಾ ಪತಿತಂ ವಾ
ಸುವಿಸ್ಮೃತಂ ವಾ ಪರಸ್ವಮವಿಸೃಷ್ಟಂ ॥
ನ ಹರತಿ ಯನ್ನ ಚ ದತ್ತೇ
ತದಕೃಶಚೌರ್ಯಾದುಪಾರಮಣಂ ॥ ೫೭ ॥

ತಾತ್ಪರ್ಯ—ಇಟ್ಟದ್ದ, ಬಿದ್ದಿದ್ದ, ಮರೆತಿದ್ದ, ಅಥವಾ ಕೊಡದೆ ಇದ್ದ ಪರದ್ರವ್ಯವನ್ನು ತೆಗೆದುಕೊಳ್ಳಬಾರದು; ಇಲ್ಲವೆ ಅನ್ಯರಿಗೆ ಕೊಡಬಾರದು ಇದಕ್ಕೆ ಸ್ಥೂಲಚೌರ್ಯದ ತ್ಯಾಗವೆಂದೆನ್ನುತ್ತಾರೆ.

ಚೌರಪ್ರಯೋಗಚೌರಾ
ರ್ಥಾದಾನವಿಲೋಪಸದೃಶಸನ್ಮಿಶ್ರಾಃ ॥
ಹೀನಾಧಿಕವಿನಿಮಾನಂ
ಪಂಚಾಸ್ತೇಯೇ ವ್ಯತೀಚಾರಾಃ ॥ ೫೮ ॥

ತಾತ್ಪರ್ಯ—ಪರರಿಗೆ ಚೌರ್ಯಕರ್ಮದಲ್ಲಿ ಪ್ರೇರಿಸುವುದು, ಕಳುವಿನ ಮಾಲನ್ನು ತೆಗೆದುಕೊಳ್ಳುವುದು, ನೀತಿಯ ವಿರುದ್ಧವಾಗಿಯೂ ರಾಜನ ಕಾಯದೆಯ ವಿರುದ್ಧವಾಗಿಯೂ ನಡೆಯುವುದು, ಹೆಚ್ಚಿನ ಬೆಲೆಯ ವಸ್ತುಗಳಲ್ಲಿ ಕಡಿಮೆ ಬೆಲೆಯ ವಸ್ತುಗಳನ್ನು ಬೆರೆಸಿ ವ್ಯವಹಾರವನ್ನು ಮಾಡುವುದು ಹೀನಾಧಿಕ ತೂಕಗಳಿಂದ ಇಲ್ಲವೆ ಅಳತೆಗಳಿಂದ ವ್ಯವಹಾರವನ್ನು ಮಾಡುವುದು ಇವು ಐದು ಅಚೌರ್ಯವ್ರತದ ಅತಿಚಾರಗಳು.

ನತು ಪರದಾರಾನ್ ಗಚ್ಛತಿ
ನ ಪರಾನ್ ಗಮಯತಿ ಚ ಪಾಪಭೀತೇರ್ಯತ್ ।
ಸಾ ಪರದಾರನಿವೃತ್ತಿಃ
ಸ್ವದಾರಸಂತೋಷನಾಮಾಪಿ ॥ ೫೯ ॥

ತಾತ್ಪರ್ಯ—ಪಾಪದ ಭಯದ ಸಲುವಾಗಿ ಯಾವನು ಪರಸ್ತ್ರೀಯರ ಸಂಭೋಗ ಮಾಡುವುದಿಲ್ಲ, ಅಥವಾ ಪರರ ಕಡೆಯಿಂದ ಮಾಡಿಸುವುದಿಲ್ಲ ಅವನಿಗೆ ಪರಸ್ತ್ರೀತ್ಯಾಗ ಅಣುವ್ರತವು ಲಭಿಸುತ್ತದೆ. ಇದಕ್ಕೆ ಸ್ವಸ್ತ್ರೀ ಸಂತೋಷವೆಂಬ ಅಣುವ್ರತವೆಂದೂ ಎನ್ನುತ್ತಾರೆ.

ಅನ್ಯವಿವಾಹಾಕರಣಾ
ನಂಗಕ್ರೀಡಾವಿಟತ್ವವಿಪುಲತೃಷಃ ॥
ಇತ್ವರಿಕಾಗಮನಂ ಚಾ
ಸ್ಮರಸ್ಯ ಪಂಚ ವ್ಯತೀಚಾರಾಃ ॥ ೬೦ ॥

ತಾತ್ಪರ್ಯ—ಪರರ ಲಗ್ನಗಳನ್ನು ಮಾಡೋಣ, ಕಾಮ ವಿಷಯದ ಹೊರತು ಅನ್ಯ ಪ್ರಕಾರದಿಂದ ಕ್ರೀಡೆಯನ್ನು ಮಾಡೋಣ, ಬೀಭತ್ಸ ಮಾತಾಡೋಣ ಇಲ್ಲವೆ ಕ್ರಿಯೆಗಳನ್ನು ಮಾಡೋಣ, ಕಾಮಸೇವನೆಯ ಲಾಲಸೆಯನ್ನು ಅತಿಶಯವಾಗಿ ಮಾಡೋಣ, ಮತ್ತು ವ್ಯಭಿಚಾರಿಯ ಸಂಗತಿಯನ್ನು ಮಾಡೋಣ. ಇವು ಐದೂ ಬ್ರಹ್ಮಚರ್ಯ ಅಣುವ್ರತದ ಅತಿಚಾರಗಳಾಗಿವೆ.

ಧನಧಾನ್ಯಾದಿಗ್ರಂಥಂ
ಪರಿಮಾಯ ತತೋಧಿಕೇಷು ನಿಸ್ಪೃಹತಾ ॥
ಪರಿಮಿತಪರಿಗ್ರಹಃ ಸ್ಯಾ-
ದಿಚ್ಛಾಪರಿಮಾಣನಾಮಾಪಿ ॥ ೬೧ ॥

ತಾತ್ಪರ್ಯ—ಧನ, ಧಾನ್ಯ ಮುಂತಾದವುಗಳ ಪರಿಗ್ರಹದ ಮರ್ಯಾದೆಯನ್ನು ಕಲ್ಪಿಸಿ, ಅದನ್ನು ಮೀರಿ ಇಚ್ಛೆಯನ್ನು ಇಡದಿರುವುದು ಪರಿಗ್ರಹ ಪ್ರಮಾಣ ಅಣುವ್ರತವು ; ಇದಕ್ಕೆ ಇಚ್ಛಾಪರಿಮಾಣವ್ರತವೆಂದೂ ಎನ್ನುತ್ತಾರೆ.

ಅತಿವಾಹನಾತಿಸಂಗ್ರಹ
ವಿಸ್ಮಯಲೋಭಾತಿಭಾರವಹನಾನಿ ॥
ಪರಿಮಿತಪರಿಗ್ರಹಸ್ಯ ಚ
ವಿಕ್ಷೇಪಾಃ ಪಂಚ ಕಥ್ಯಂತೇ ॥ ೬೨ ॥

ತಾತ್ಪರ್ಯ—ಲೋಭ ಮೂಲಕವಾಗಿ ಶಕ್ತಿಗಿಂತ ಹೆಚ್ಚು ನಡೆಸೋಣ, ಹೆಚ್ಚಿನ ವಸ್ತುಗಳ ಸಂಗ್ರಹವನ್ನು ಮಾಡೋಣ, ಅನ್ಯರ ಹತ್ತಿರವಿರುವ ಪರಿಗ್ರಹವನ್ನು ನೋಡಿ ಆಶ್ಚರ್ಯವನ್ನು ಹೊಂದೋಣ, ದೊರೆತ ಲಾಭಕ್ಕಿಂತ ಹೆಚ್ಚಿಗೆ ಲೋಭವನ್ನು ಮಾಡೋಣ, ಮತ್ತು ಲೋಭದಿಂದ ಅಳತೆಗೆಟ್ಟು ಭಾರವನ್ನು ಹೊರಿಸೋಣ, ಇವು ಐದು, ಪರಿಗ್ರಹ ಪ್ರಮಾಣ ಅಣುವ್ರತದ ಅತಿಚಾರಗಳೆಂದು ಹೇಳುತ್ತಾರೆ.

ಪಂಚಾಣುವ್ರತನಿಧಯೋ
ನಿರತಿಕ್ರಮಾಣಾಃ ಫಲಂತಿ ಸುರಲೋಕಂ ॥
ಯತ್ರಾವಧಿರಷ್ಟಗುಣಾಃ
ದಿವ್ಯಶರೀರಂ ಚ ಲಭ್ಯಂತೇ ॥ ೬೩ ॥

ತಾತ್ಪರ್ಯ — ಅತಿಚಾರರಹಿತವಾದ ಐದು ಅಣುವ್ರತಗಳನ್ನು ಧಾರಣ ಮಾಡುವವರಿಗೆ ಸ್ವರ್ಗಲೋಕದ ಫಲವು ಪ್ರಾಪ್ತವಾಗುತ್ತದೆ.

ಸ್ವರ್ಗದಲ್ಲಿ ಅವಧಿಜ್ಞಾನ ಅಣಿಮಾಮಹಿಮಾದಿಕ ಎಂಟು ಗುಣಗಳು ಮತ್ತು ಸಪ್ತಧಾತುರಹಿತವಾದ ದಿವ್ಯ ಶರೀರವು ಪ್ರಾಪ್ತವಾಗುತ್ತದೆ.

ಮಾತಂಗೋ ಧನದೇವಶ್ಚ
ವಾರಿಷೇಣಸ್ತತಃ ಪರಃ ॥
ನೀಲೀ ಜಯಶ್ಚ ಸಂಪ್ರಾಪ್ತಾಃ
ಪೂಜಾತಿಶಯಮುತ್ತಮಂ ॥ ೬೪ ॥

ತಾತ್ಪರ್ಯ—ಅಹಿಂಸಾ ಅಣುವ್ರತದಿಂದ ಯಮಪಾಲ ಚಾಂಡಾಲನು, ಸತ್ಯದಿಂದ ಧನದೇವನು, ಅಚೌರ್ಯದಿಂಡ ವಾರಿಷೇಣ ರಾಜಪುತ್ರನು ಬ್ರಹ್ಮಚರ್ಯೆಯಿಂದ ನೀಲಿಯು ಮತ್ತು ಪರಿಗ್ರಹ ಪ್ರಮಾಣದಿಂದ ಜಯಕುಮಾರನು, ಉತ್ತಮವಾದ ಪೂಜಾ ಸತ್ಕಾರವನ್ನು ಹೊಂದಿದ್ದಾರೆ.

ಧನಶ್ರೀಸತ್ಯಘೋಷೌ ಚ
ತಾಪಸಾರಕ್ಷಕಾವಪಿ ॥
ಉಪಾಖ್ಯೇಯಾಸ್ತಥಾ ಶ್ಮಶ್ರು
ನವನೀತೋ ಯಥಾಕ್ರಮಂ ॥ ೬೫ ॥

ತಾತ್ಪರ್ಯ—ಹಿಂಸೆಯ ಪಾತಕದಿಂದ ಧನಶ್ರೀಯು, ಸುಳ್ಳುತನದ ಪಾಪದಿಂದ ಸತ್ಯಘೋಷನು, ಕಳುವಿನ ಪಾಪದಿಂದ ತಾಪಸೀ ಚೋರನು, ಪರಸ್ತ್ರೀಯ ಸೇವನದಿಂದ ಕೊತ್ತವಾಲನು, ಮತ್ತು ಪರಿಗ್ರಹದ ಆಸೆಯಿಂದ ಶ್ಮಶ್ರುನವನೀತನು ಈ ಪ್ರಕಾರ ಪ್ರಖ್ಯಾತರಾಗಿದ್ದಾರೆ.

ಮದ್ಯಮಾಂಸಮಧುತ್ಯಾಗೈಃ
ಸಹಾಣುವ್ರತಪಂಚಕಂ ॥
ಅಷ್ಟೌಮೂಲಗುಣಾನಾಹು
ರ್ಗೃಹಿಣಾಂ ಶ್ರಮಣೋತ್ತಮಾಃ ॥ ೬೬ ॥

ತಾತ್ಪರ್ಯ—ಮಧ್ಯ, ಮಾಂಸ ಮತ್ತು ಮಧು ಈ ಮೂರರ ತ್ಯಾಗವನ್ನು ಮಾಡೋಣ ಮತ್ತು ಐದು ಅಣುವ್ರತಗಳನ್ನು ಪಾಲಿಸೋಣ. ಹೀಗೆ ಇವು ಎಂಟು ಶ್ರಾವಕರ ಮೂಲಗುಣಗಳಾಗಿವೆ ಎಂದು ಗಣಧರರು ಹೇಳಿದ್ದಾರೆ.

॥ ಇತಿ ಶ್ರೀ ಸಮಂತಭದ್ರಸ್ವಾಮಿವಿರಚಿತೇ ರತ್ನಕರಂಡನಾಮ್ನಿ ಉಪಾಸಕಾಧ್ಯಯನೆ ಅಣುವ್ರತ ವರ್ಣನಂ ನಾಮ ತೃತೀಯ ಪರಿಚ್ಛೇದಃ ॥

ದಿಗ್ವ್ರತಮನರ್ಥದಂಡ
ವ್ರತಂ ಚ ಭೋಗೋಪಭೋಗಪರಿಮಾಣಂ ॥
ಅನುಬೃಂಹಣಾದ್ಗುಣಾನಾ
ಮಾಖ್ಯಾಂತಿ ಗುಣವ್ರತಾನ್ಯಾರ್ಯಾಃ ॥ ೬೭ ॥

ತಾತ್ಪರ್ಯ—ಮೂಲಗುಣದ ವೃದ್ಧಿಯಾಗಬೇಕೆಂದು ಆಚಾರ್ಯರು ದಿಗ್ವ್ರತ, ಅನರ್ಥದಂಡವ್ರತ ಮತ್ತು ಭೋಗೋಪಭೋಗಪರಿಣಾಮವ್ರತ ಹೀಗೆ ಮೂರು ಗುಣವ್ರತಗಳನ್ನು ಹೇಳಿದ್ದಾರೆ.

ದಿಗ್ವಲಯಂ ಪರಿಗಣಿತಂ
ಕೃತ್ವಾತೋಽಹಂ ಬಹಿರ್ನ ಯಾಸ್ಯಾಮಿ ॥
ಇತಿ ಸಂಕಲ್ಪೋದಿಗ್ವ್ರತ
ಮಾಮೃತ್ಯಣುಪಾಪವಿನಿವೃತ್ತ್ಯೈ ॥ ೬೮ ॥

ತಾತ್ಪರ್ಯ—ಸೂಕ್ಷ್ಮಪಾಪಗಳ ನಿವಾರಣಾರ್ಥವಾಗಿ ಹತ್ತು ದಿಶೆಗಳಲ್ಲಿ ಇಂಥ ದಿಶೆಗೆ ಇಂತಿಷ್ಟು ಮರ್ಯಾದೆಯನ್ನು ಮೀರಿ ಹೋಗಲಿಕ್ಕಿಲ್ಲೆಂದು ಜನ್ಮದವರೆಗೆ ಸಂಕಲ್ಪವನ್ನು ಮಾಡುವುದಕ್ಕೆ ದಿಗ್ವ್ರತವೆಂದೆನ್ನುತ್ತಾರೆ.

ಮಕರಾಕರಸರಿದಟವೀ
ಗಿರಿಜನಪದಯೋಜನಾನಿ ಮರ್ಯಾದಾಃ ॥
ಪ್ರಾಹುರ್ದಿಶಾಂ ದಶಾನಾಂ
ಪ್ರತಿಸಂಹಾರೇ ಪ್ರಸಿದ್ಧಾನಿ ॥ ೬೯ ॥

ತಾತ್ಪರ್ಯ—ಸಮುದ್ರ, ನದೀ, ವನ, ಪರ್ವತ, ದೇಶ ಮತ್ತು ಯೋಜನ ಇವುಗಳಿಗೆ ಲೋಕಪ್ರಸಿದ್ಧ ಮರ್ಯಾದೆಗಳೆಂದೆನ್ನುತ್ತಾರೆ. ಹತ್ತು ದಿಶೆಗಳ ಪ್ರಮಾಣವನ್ನು ಮಾಡುವಾಗ್ಗೆ ಈ ಗುರುತುಗಳ ಅಥವಾ ಇಂತಿಷ್ಟು ಯೋಜನೆಗಳ ಆಚೆಗೆ ಹೋಗಲಿಕ್ಕಿಲ್ಲೆಂದು ಪ್ರಮಾಣ ಮಾಡಬೇಕು.

ಅವಧೇರ್ಬಹಿರಣುಪಾಪಂ
ಪ್ರತಿವಿರತೇರ್ದಿಗ್ವ್ರತಾನಿ ಧಾರಯತಾಂ ॥
ಪಂಚಮಹಾವ್ರತಪರಿಣತಿ-
ಮಣುವ್ರತಾನಿ ಪ್ರಪದ್ಯಂತೇ ॥ ೭೦ ॥

ತಾತ್ಪರ್ಯ—ದಿಗ್ವ್ರತವನ್ನು ಧಾರಣ ಮಾಡಿದವನಿಗೆ ಮರ್ಯಾದಿತ ಪ್ರದೇಶದ ಹೊರಗಿನ ಸೂಕ್ಷ್ಮಪಾತಕವು ಸಂಭವಿಸುವದಿಲ್ಲ. ಆದಕ್ಕಾಗಿ ಅವನ ಅಣುವ್ರತಗಳಿಗೆ ಪಂಚಮಹಾವ್ರತಗಳ ಭಾವನೆಗಳ ಪ್ರಾಪ್ತಿಯಾಗುತ್ತದೆ.

ಪ್ರತ್ಯಾಖ್ಯಾನತನುತ್ವಾ-
ನ್ಮಂದತರಾಶ್ಚರಣಮೋಹಪರಿಣಾಮಾಃ ॥
ಸತ್ವೇನ ದುರವಧಾರಾ
ಮಹಾವ್ರತಾಯ ಪ್ರಕಲ್ಪ್ಯಂತೇ ॥ ೭೧ ॥

ತಾತ್ಪರ್ಯ—ದಿಗ್ವ್ರತವನ್ನು ಪಾಲಿಸುವವರ ಪ್ರತ್ಯಾಖ್ಯಾನಾವರಣೀಯ ಕರ್ಮದ ಮಂದ ಉದಯವು ಆಗುವುದರಿಂದ ಚಾರಿತ್ರ ಮೋಹನೀಯದ ಪರಿಣಾಮಗಳು ತೀರ ಮಂದವಾಗಿ ಆಗುತ್ತವೆ. ಅವು ಅಸ್ತಿತ್ವದಲ್ಲಿದ್ದರೂ ಅವುಗಳ ಅಸ್ತಿತ್ವವು ಒಳ್ಳೇ ಕಷ್ಟದಿಂದ ತಿಳಿಯಲ್ಪಡುತ್ತವೆಂದು ಮಹಾವ್ರತಗಳು ಉಪಚಾರನಯದಿಂದ ಕಲ್ಪಿಸಲ್ಪಟ್ಟವೆ.

ಪಂಚಾನಾಂ ಪಾಪಾನಾಂ
ಹಿಂಸಾದೀನಾಂ ಮನೋವಚನಕಾಯೈಃ ॥
ಕೃತಕಾರಿತಾನುಮೋದೈ-
ಸ್ತ್ಯಾಗಸ್ತು ಮಹಾವ್ರತಂ ಮಹತಾಂ ॥ ೭೨ ॥

ತಾತ್ಪರ್ಯ—ಹಿಂಸೆ, ಮೋಸ, ಕಳವು, ಮೈಥುನ ಮತ್ತು ಪರಿಗ್ರಹ ಹೀಗೆ ಪಂಚ ಮಹಾಪಾತಕಗಳ, ಮನ, ವಚನ, ದೇಹ, ಕಾರಿತ, ಅನುಮೋದನ ಇವುಗಳಿಂದ ತ್ಯಾಗವನ್ನು ಮಾಡುವುದು ಮಹಂತ ಪುರುಷರ ಮಹಾವ್ರತವು.

ಊರ್ಧ್ವಾಧಸ್ತಾತ್ತಿರ್ಯ-
ಗ್ವ್ಯತಿಪಾತಾಃ ಕ್ಷೇತ್ರವೃದ್ಧಿರವಧೀನಾಂ ॥
ವಿಸ್ಮರಣಂ ದಿಗ್ವಿರತೇ
ರತ್ಯಾಶಾಃ ಪಂಚ ಮನ್ಯಂತೇ ॥ ೭೩ ॥

ತಾತ್ಪರ್ಯ— ಅಜ್ಞಾನದಿಂದಾಗಲಿ, ಇಲ್ಲವೆ ಪ್ರಮಾದದಿಂದಾಗಲಿ, ನಿಶ್ಚಯಿಸಲ್ಪಟ್ಟ ಮರ್ಯಾದೆಯನ್ನು ಮೀರಿ ಊರ್ಧ್ವ ದಿಕ್ಕಿಗೆ ಅಧಿಕವಾಗಿ ಏರೋಣ, ಅಧೋದಿಕ್ಕಿಗೆ ಅಧಿಕವಾಗಿ ಇಳಿಯೋಣ, ಅಡ್ಡದಿಕ್ಕಿಗೆ ಅಧಿಕವಾಗಿ ಹೋಗೋಣ,ಅಜ್ಞಾನದಿಂದಾಗಲೀ ಪ್ರಮಾದದಿಂದಾಗಲೀ ಮರ್ಯಾದೆಯನ್ನು ಬೆಳೆಸೋಣ ಮತ್ತು ನಿಶ್ಚಯಿಸಿದ ಮರ್ಯಾದೆಯನ್ನು ಮರೆತುಬಿಡೋಣ ಇವು ಐದು ದಿಗ್ವ್ರತದ ಅತಿಚಾರಗಳೆಂದು ತಿಳಿಯಬೇಕು.

ಅಭ್ಯಂತರಂ ದಿಗವಧೇ
ರಪಾರ್ಥಿಕೇಭ್ಯಃ ಸಪಾಪಯೋಗೇಭ್ಯಃ ॥
ವಿರಮಣಮನರ್ಥದಂಡ-
ವ್ರತಂ ವಿದುರ್ವ್ರತಧರಾಗ್ರಣ್ಯಃ ॥ ೭೪ ॥

ತಾತ್ಪರ್ಯ—ನಮ್ಮಿಂದ ಮರ್ಯಾದಿಸಲ್ಪಟ್ಟ ಮರ್ಯಾದೆಯಲ್ಲಿ ನಿರರ್ಥಕವಾಗಿ ಸಂಭವಿಸುವ ಮನ, ವಚನ ಮತ್ತು ದೇಹ ಇವುಗಳ ಪಾತಕಗಳ ತ್ಯಾಗವನ್ನು ಮಾಡುವುದಕ್ಕೆ ಗಣಧರ ದೇವರು ಅನರ್ಥದಂಡವ್ರತವೆಂದು ತಿಳಿಯುತ್ತಾರೆ.

ಪಾಪೋಪದೇಶಹಿಂಸಾ-
ದಾನಾಪಧ್ಯಾನದುಃಶ್ರುತೀಃ ಪಂಚ ॥
ಪ್ರಾಹುಃ ಪ್ರಮಾದಚರ್ಯಾ-
ಮನರ್ಥದಂಡಾನದಂಡಧರಾಃ ॥ ೭೫ ॥

ತಾತ್ಪರ್ಯ—ಪಾಪೋಪದೇಶ, ಹಿಂಸಾದಾನ, ಅಪಧ್ಯಾನ, ದುಶ್ರುತಿ ಮತ್ತು ಪ್ರಮಾದಚರ್ಯಾ ಹೀಗೆ ಅನರ್ಥದಂಡದ ಐದು ಭೇದಗಳನ್ನು ಗಣಧರ ದೇವತೆಗಳು ಹೇಳುತ್ತಾರೆ.

ತಿರ್ಯಕ್ಕ್ಲೇಶವಣಿಜ್ಯಾ-
ಹಿಂಸಾರಂಭಪ್ರಲಂಬನಾದೀನಾಂ ॥
ಪ್ರಸವಃ ಕಥಾಪ್ರಸಂಗಃ
ಸ್ಮರ್ತವ್ಯಃ ಪಾಪ ಉಪದೇಶಃ ॥ ೭೬ ॥

ತಾತ್ಪರ್ಯ—ಪಶುಪಕ್ಷ್ಯಾದಿಗಳಿಗೆ ದುಃಖ ಉತ್ಪನ್ನವಾಗುವಂತೆ ಉಪದೇಶವನ್ನು ಮಾಡೋಣ. ವ್ಯಾಪಾರದ ಉಪದೇಶವನ್ನು ಮಾಡೋಣ, ಹಿಂಸೆಯು ಆರಂಭವಾಗುವಂಥ ಉಪದೇಶವನ್ನು ಮಾಡೋಣ, ಕಪಟ ಮತ್ತು ಮೋಸ ಮಾಡುವ ಉಪದೇಶವನ್ನು ಮಾಡೋಣ ಇವುಗಳಿಗೆ ಪಾಪೋಪದೇಶ ಅನರ್ಥದಂಡವೆನ್ನುತ್ತಾರೆ.

ಪರಶುಕೃಪಾಣಖನಿತ್ರ-
ಜ್ವಲನಾಯುಧಶೃಂಗಶೃಂಖಲಾದೀನಾಂ ॥
ವಧಹೇತೂನಾಂ ದಾನಂ
ಹಿಂಸಾದಾನಂ ಬ್ರುವಂತಿ ಬುಧಾಃ ॥ ೭೭ ॥

ಪ್ರಾಣಿಗಳಿಗೆ ಗೌರವವೂ, ಸುಖಸಂಪತ್ತುಗಳ ಇಷ್ಟಸಾಮಗ್ರಿಗಳೂ ಪ್ರಾಪ್ತವಾಗುತ್ತದೆ.

ಆಹಾರೌಷಧಯೋಃ
ಪ್ಯುಪಕರಣಾವಾಸಯೋಶ್ಚ ದಾನೇನ ॥
ವೈಯಾವೃತ್ತ್ಯಂ ಬ್ರುವತೇ
ಚತುರಾತ್ಮತ್ವೇನ ಚತುರಸ್ರಾಃ ॥ ೧೧೭ ॥

ತಾತ್ಪರ್ಯ—ದಾನದಲ್ಲಿ ಆಹಾರದಾನ, ಔಷಧದಾನ, ಜ್ಞಾನೋಪಕರಣದಾನ, ವಸ್ತಿಕಾದಾನ ಎಂಬ ನಾಲ್ಕು ದಾನಗಳ ಗಣಧರರಿಂದ ಹೇಳಲ್ಪಟ್ಟಿವೆ.

ಶ್ರೀಷೇಣವೃಷಭಸೇನೇ
ಕೌಂಡೇಶಃ ಸೂಕರಶ್ಚ ದೃಷ್ಟಾಂತಾಃ ॥
ವೈಯಾವೃತ್ತ್ಯಸ್ಯೈತೇ
ಚತುರ್ವಿಕಲ್ಪಸ್ಯ ಮಂತವ್ಯಾಃ ॥ ೧೧೮ ॥

ತಾತ್ಪರ್ಯ— ಶ್ರೀಷೇಣನು ಆಹಾರದಾನದಲ್ಲಿ, ವೃಷಭಸೇನನು ಔಷಧದಾನದಲ್ಲಿ, ಕೌಂಡೇಶನು ಶಾಸ್ತ್ರದಾನದಲ್ಲಿ, ಹಂದಿಯು ಆವಾಸದಾನ (ಅಭಯದಾನ)ದಲ್ಲಿ ಹೀಗೆ ನಾಲ್ಕು ವಿಧವಾದ ವೈಯಾವೃತ್ಯಕ್ಕೆ ಈ ನಾಲ್ವರು ದೃಷ್ಟಾಂತವಾಗಿದ್ದಾರೆ.

ದೇವಾಧಿದೇವಚರಣೇ
ಪರಿಚರಣಂ ಸರ್ವದುಃಖನಿರ್ಹರಣಂ ||
ಕಾಮದುಹಿ ಕಾಮದಾಹಿನಿ
ಪರಿಚಿನುಯಾದಾದೃತೋ ನಿತ್ಯಂ || ೧೧೯ ||

ತಾತ್ಪರ್ಯ—ಇಚ್ಛಿತ ಮನೋರಥಗಳನ್ನು ಪೂರ್ಣಮಾಡುವಂಥ, ಕಾಮನನ್ನು ಸುಟ್ಟಂಥ ದೇವಾದಿದೇವ (ಸರ್ವಜ್ಞ) ನ ಪಾದಸೇವೆಯನ್ನು ನಿತ್ಯದಲ್ಲೂ, ಭಕ್ತಿಯಿಂದ ಮಾಡಬೇಕು ; ಆದರಿಂದ ಎಲ್ಲ ದುಃಖವೂ ನಾಶವಾಗುತ್ತದೆ.

ಅರ್ಹಚ್ಚರಣಸಪರ್ಯಾ-
ಮಹಾನುಭಾವಂ ಮಹಾತ್ಮನಾಮವದತ್ ||
ಭೇಕಃ ಪ್ರಮೋದಮತ್ತಃ
ಕುಸುಮೋನೈಕೇನ ರಾಜಗೃಹೇ || ೧೨೦ ||

ತಾತ್ಪರ್ಯ—ರಾಜಗೃಹ ಪಟ್ಟಣದಲ್ಲಿ ಸಂತೋಷದಿಂದ ಉನ್ಮತ್ತವಾದ ಒಂದು ಕಪ್ಪೆಯು (ಬಾಯಲ್ಲಿ) ಒಂದು ಹೂವು ತೆಗೆದುಕೊಂಡು ಅರ್ಹತ್ಪರಮೇಶ್ವರನ ಪಾದಪೂಜೆಯ ಮಹಿಮೆಯನ್ನು ಮಹಾತ್ಮರಿಗೆ ಹೇಳಿತು.

ಹರಿತಪಿಧಾನನಿಧಾನೆ
ಹ್ಯನಾದರಾಸ್ಮರಣಮತ್ಸರತ್ವಾನಿ ||
ವೈಯಾವೃತ್ತ್ಯಸ್ಯೈತೇ
ವ್ಯತಿಕ್ರಮಾಃ ಪಂಚ ಕಥ್ಯಂತೇ || ೧೨೧ ||

ತಾತ್ಪರ್ಯ—ಹಸಿಯಾದ ಎಲೆಯಮೇಲೆ (ಆಹಾರವನ್ನು) ಇಡುವದು ಆದರಿಂದಲೇ ಮುಚ್ಚುವುದು, ಸತ್ಪಾತ್ರನಲ್ಲಿ ಪ್ರೀತಿ ಇಲ್ಲದೆ ಇರುವುದು, (ದಾನದವಿಧಿ ಮುಂತಾದವುಗಳನ್ನು) ಮರೆಯುವುದು, ಈರ್ಷೆಯಿಂದ ದಾನ ಮಾಡುವುದು, ಇವು ವೈಯಾವೃತ್ಯಶಿಕ್ಷಾವ್ರತದ ಐದು ಅತಿಚಾರಗಳೆಂದು ಹೇಳಲ್ಪಟ್ಟವೆ.

॥ ಇತಿ ಶ್ರೀ **ಸಮಂತಭದ್ರಸ್ವಾಮಿ ವಿರಚಿತೇ ರತ್ನಕರಂಡನಾಮ್ನಿ ಉಪಾಸಕಾಧ್ಯಯನೇ ಶಿಕ್ಷಾವ್ರತವರ್ಣನಂ ನಾಮ ಪಂಚಮ ಪರಿಚ್ಛೇದಃ** ॥

ತಾತ್ಪರ್ಯ—ಈ ಪ್ರಕಾರ ಶ್ರೀ ಸಮಂತಭದ್ರಸ್ವಾಮಿಯವರಿಂದ ರಚಿಸಲ್ಪಟ್ಟ ರತ್ನಕರಂಡಶ್ರಾವಕಾಚಾರದೊಳಗಿನ ಶಿಕ್ಷಾವ್ರತ ವರ್ಣನವೆಂಬ ಐದನೇ ಭಾಗವು ಸಮಾಪ್ತವಾಯಿತು.

ಉಪಸರ್ಗೇ ದುರ್ಭಿಕ್ಷೇ
ಜರಸಿ ರುಜಾಯಾಂ ಚ ನಿಃಪ್ರತೀಕಾರೇ ॥
ಧರ್ಮಾಯ ತನುವಿಮೋಚನ-
ಮಾಹುಃಸಲ್ಲೇಖನಾಮಾರ್ಯಾಃ ॥ ೧೨೨ ॥

ತಾತ್ಪರ್ಯ—ಉಪಸರ್ಗ, ದುರ್ಭಿಕ್ಷ, ಮುಪ್ಪು, ರೋಗ ಇವುಗಳಿಗೆ ಪ್ರತೀಕಾರ ಇಲ್ಲದೇ ಇದ್ದ ಪಕ್ಷಕ್ಕೆ ಧರ್ಮಕ್ಕಾಗಿ ಶರೀರವನ್ನು ಬಿಡುವುದಕ್ಕೆ ಪೂಜ್ಯರು ಸಲ್ಲೇಖನವೆಂದು ಹೇಳಿದ್ದಾರೆ.

ಅಂತಃಕ್ರಿಯಾಧಿಕರಣಂ
ತಪಃಫಲಂ ಸಕಲದರ್ಶಿನಃ ಸ್ತುವತೇ ॥
ತಸ್ಮಾದ್ಯಾವದ್ವಿಭವಂ
ಸಮಾಧಿಮರಣೇ ಪ್ರಯತಿತವ್ಯಂ ॥ ೧೨೩ ॥

ತಾತ್ಪರ್ಯ—ಮನಃಶುದ್ಧಿಯನ್ನು ಮಾಡವುದಕ್ಕೆ ಸರ್ವಜ್ಞರು ತಪಃ ಫಲವೆಂದು ಹೊಗಳುವರು ; ಆದ್ದರಿಂದ ತಮ್ಮ ಸಾಮರ್ಥ್ಯದ ಮೇರೆಗೆ (ಎಲ್ಲರೂ) ಸಮತಾಭಾವದೊಡನೆ ಕೂಡಿದ ಮರಣದಲ್ಲಿ (ಸಮಾಧಿ ಮರಣ ದಲ್ಲಿ) ಪ್ರಯತ್ನ ಮಾಡತಕ್ಕದ್ದು.

ಸ್ನೇಹಂ ವೈರಂ ಸಂಗಂ
ಪರಿಗ್ರಹಂ ಚಾಪಹಾಯ ಶುದ್ಧಮನಾಃ ||
ಸ್ವಜನಂ ಪರಿಜನಮಪಿ ಚ
ಕ್ಷಾಂತ್ವಾ ಕ್ಷಮಯೇತ್ಪ್ರಿಯೈರ್ವಚನೈಃ ||೧೨೪ ||

ತಾತ್ಪರ್ಯ—ಶುದ್ಧವಾದ ಮನಸ್ಸುಳ್ಳವನು ಸಲ್ಲೇಖನಾವ್ರತವನ್ನು ಧರಿಸಿದ್ದರೆ (ಸ್ವಜನರಲ್ಲಿ) ಸ್ನೇಹವನ್ನು, (ವೈರಿಗಳಲ್ಲಿ) ವೈರವನ್ನು, (ಸ್ತ್ರೀಪುತ್ರಾ ದಿಗಳಲ್ಲಿ) ಸಂಗವನ್ನು, ಮತ್ತು (ಇಪ್ಪತ್ತುನಾಲ್ಕು ಪ್ರಕಾರದ ಬಾಹ್ಯಾಭ್ಯಂತರ) ಪರಿಗ್ರಹವನ್ನು ಬಿಟ್ಟು, ಸ್ವಜನರನ್ನೂ ಪರಜನರನ್ನೂ ಕ್ಷಮಿಸಿ, ಪ್ರಿಯನುಡಿ ಗಳಿಂದ ಅವರ ಕ್ಷಮೆಯನ್ನು ಬೇಡಿಕೊಳ್ಳಬೇಕು.

ಆಲೋಚ್ಯ ಸರ್ವಮೇನಃ
ಕೃತಕಾರಿತಮನುಮತಂ ಚ ನಿರ್ವ್ಯಾಜಂ ||
ಆರೋಪಯೇನ್ಮಹಾವ್ರತ-
ಮಾಮರಣಸ್ಥಾಯಿ ನಿಶ್ಶೇಷಂ || ೧೨೫ ||

ತಾತ್ಪರ್ಯ—ತಾನು ಮಾಡಿದಂಥ, ಮಾಡಿಸಿದಂಥ, ಒಡಂಬಟ್ಟಂಥ ಸಮಸ್ತ ಪಾಪಗಳನ್ನು ನಿಷ್ಕಪಟ ರೀತಿಯಿಂದ ಉಚ್ಚರಿಸಿ, ಮರಣಪರಿಯಂತರ ಮಹಾವ್ರತಗಳನ್ನು ಧರಿಸಬೇಕು.

ಶೋಕಂ ಭಯಮವಸಾದಂ
ಕ್ಲೇದಂ ಕಾಲುಷ್ಯಮರತಿಮಪಿ ಹಿತ್ವಾ ॥
ಸತ್ತ್ವೋತ್ಸಾಹಮುದೀರ್ಯ ಚ
ಮನಃ ಪ್ರಸಾಧ್ಯಂ ಶ್ರುತೈರಮೃತೈಃ ॥ ೧೨೬ ॥

ತಾತ್ಪರ್ಯ—ಶೋಕ, ಭಯ, ಬಳಲಿಕೆ, ಕ್ಲೇಶ, ರಾಗ, ದ್ವೇಷ ಮತ್ತು ಅರತಿ ಇವುಗಳನ್ನು ಬಿಟ್ಟು, ಶರೀರದ ಬಲೋತ್ಸಾಹವನ್ನು ತೋರಿಸಿ, ಅಮೃತದಂತೆ ಮಧುರವಾದ ಜ್ಞಾನದಿಂದ ತನ್ನ ಮನುಸ್ಸನ್ನು ಪ್ರಸನ್ನ ಮಾಡಬೇಕು.

ಆಹಾರಂ ಪರಿಹಾಪ್ಯ
ಕ್ರಮಶಃ ಸ್ನಿಗ್ಧಂ ವಿವರ್ಧಯೇತ್ಪಾನಂ ॥
ಸ್ನಿಗ್ಧಂ ಚ ಹಾಪಯಿತ್ವಾ
ಖರಪಾನಂ ಪೂರಯೇತ್ಕ್ರಮಶಃ ॥ ೧೨೭ ॥

ತಾತ್ಪರ್ಯ—ಕ್ರಮದಿಂದ ಆಹಾರವನ್ನು ಬಿಟ್ಟು ಹಾಲು ಮುಂತಾದ ಸ್ನಿಗ್ಧಪಾನವನ್ನು ವೃದ್ಧಿಗೊಳಿಸಬೇಕು. ನಂತರ ಕ್ರಮದಿಂದ ಅದನ್ನು ಕಡಿಮೆಮಾಡಿ ನೀರು ಮುಂತಾದ ರುಕ್ಷ (ಸ್ನಿಗ್ಧವಲ್ಲದ) ಪಾನವನ್ನು ಮಾಡಬೇಕು.

ಖರಪಾನಹಾಪನಾಮಪಿ
ಕೃತ್ವಾ ಕೃತ್ವೋಪವಾಸಮಪಿ ಶಕ್ತ್ಯಾ ॥
ಪಂಚನಮಸ್ಕಾರಮನಾ-
ಸ್ತನುಂ ತ್ಯಜೇತ್ಸರ್ವಯತ್ನೇನ ॥ ೧೨೮ ॥

ತಾತ್ಪರ್ಯ — ನಂತರ ಪ್ರಾಸುಕವಾದ ನೀರನ್ನಾದರೂ ಬಿಟ್ಟು, ಕೈಲಾದಮಟ್ಟಿಗೆ ಉಪವಾಸವನ್ನು ಮಾಡಿ, ಪಂಚನಮಸ್ಕಾರದಲ್ಲಿ ಮನಸ್ಸಿಟ್ಟು (ವ್ರತಸಂಯಮ, ಚಾರಿತ್ರ, ಧ್ಯಾನ ಇವುಗಳಲ್ಲಿ ಎಚ್ಚರುಳ್ಳವನಾಗಿ) ಸರ್ವ ಯತ್ನದಿಂದ ದೇಹವನ್ನು ಬಿಡಬೇಕು.

ಜೀವಿತಮರಣಾಶಂಸೆ
ಭಯಮಿತ್ರಸ್ಮೃತಿನಿದಾನನಾಮಾನಃ ॥
ಸಲ್ಲೇಖನಾತಿಚಾರಾಃ
ಪಂಚ ಜಿನೇಂದ್ರೈಃ ಸಮಾದಿಷ್ಟಾಃ ॥ ೧೨೯॥

ತಾತ್ಪರ್ಯ—೧ ಬದುಕಬೇಕೆನ್ನುವುದು, ೨ ಸಾಯಬೇಕೆಂಬುವುದು, ೩ ಭಯ, ೪ ಮಿತ್ರಸ್ಮರಣೆಯು, ೫ ನಿದಾನ (ಮುಂದೆ ತನಗೆ ಏನಾದರೂ ದೊರೆಯಬೇಕೆಂದು ಬಯಸುವುದು) ಇವು ಶ್ರೀ ಜಿನೇಶ್ವರರಿಂದ ಸಲ್ಲೇಖನಾವ್ರತದ ಐದು ಅತಿಚಾರಗಳೆಂದು ಹೇಳಲ್ಪಟ್ಟಿವೆ.

ನಿಃಶ್ರೇಯಸಮಭ್ಯುದಯಂ
ನಿಸ್ತೀರಂ ದುಸ್ತರಂ ಸುಖಾಂಬುನಿಧಿಂ ॥
ನಿಃಪಿಬತಿ ಪೀತಧರ್ಮಾ
ಸರ್ವೈರ್ದುಃಖೈರನಾಲೀಢಃ ॥ ೧೩೦ ॥

ತಾತ್ಪರ್ಯ—ಧರ್ಮಾಮೃತವನ್ನು ಪ್ರಾಶಿಸುವ ಸಲ್ಲೇಖನಾ ವ್ರತ ಧಾರಿಗಳಾದ ಜೀವಗಳು ದುಃಖದಿಂದ ಆಕ್ರಮಿಸಲ್ಪಡಲಿಕ್ಕೆ ಅವಶ್ಯಕವಾದ ಅಹಮಿಂದ್ರ, ಪದವಿಯನ್ನೂ, ಅಪಾರ ಸುಖದ ಸ್ಥಾನವಾದ ಮೋಕ್ಷವನ್ನೂ ಪಡೆಯುತ್ತವೆ.

ಜನ್ಮಜರಾಮಯಮರಣೈಃ
ಶೋಕೈರ್ದುಃಖೈರ್ಭಯೈಶ್ಚ ಪರಿಮುಕ್ತಂ ॥
ನಿರ್ವಾಣಂ ಶುದ್ಧಸುಖಂ
ನಿಶ್ರೇಯಸಮಿಷ್ಯತೇ ನಿತ್ಯಂ ॥ ೧೩೧ ॥

ತಾತ್ಪರ್ಯ—ಹುಟ್ಟುವುದು, ಮುಪ್ಪು, ರೋಗ, ಮರಣ, ಶೋಕ, ದುಃಖ, ಮತ್ತು ಭಯ ಇವುಗಳಿಂದ ರಹಿತವಾದ ಶುದ್ಧ (ಉಪಾಧಿರಹಿತ) ನಿತ್ಯ ಸುಖವು ನಿಶ್ರೇಯಸ ಅಥವಾ ಮೋಕ್ಷವೆಂದು ಹೇಳಲ್ಪಡುತ್ತದೆ.

ವಿದ್ಯಾದರ್ಶನಶಕ್ತಿ-
ಸ್ವಾಸ್ಥ್ಯಪ್ರಹ್ಲಾದತೃಪ್ತಿಶುದ್ಧಿಯುಜಃ ॥
ನಿರತಿಶಯಾ ನಿರವಧಯೋ
ನಿಃಶ್ರೇಯಸಮಾವಸಂತಿ ಸುಖಂ ॥ ೧೩೨ ॥

ತಾತ್ಪರ್ಯ—ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಉತ್ಕೃಷ್ಟವಾದ ಉದಾಸೀನತೆ, (ವೀತರಾಗತ್ವವು) ಅನಂತ ಸುಖ, ವಿಷಯಾಪೇಕ್ಷೆ ಇಲ್ಲದೆ ಇರುವುದು, ಮತ್ತು ಆತ್ಮಶುದ್ಧಿ ಇವುಗಳಿಂದ ಕೂಡಿದವರು ಹೆಚ್ಚು ಕಡಿಮೆ ಇಲ್ಲದೆ ಅನಂತಕಾಲದವರೆಗೆ ಮೋಕ್ಷದಲ್ಲಿ ಸುಖದಿಂದ ಇರುತ್ತಾರೆ.

ಕಾಲೇ ಕಲ್ಪಶತೇಽಪಿ ಚ
ಗತೇ ಶಿವಾನಾಂ ನ ವಿಕ್ರಿಯಾ ಲಕ್ಷ್ಯಾ॥
ಉತ್ಪಾತೋಽಪಿ ಯದಿ ಸ್ಯಾತ್
ತ್ರಿಲೋಕಸಂಭ್ರಾಂತಿಕರಣಪಟುಃ ॥ ೧೩೩ ॥

ತಾತ್ಪರ್ಯ—ನೂರಾರು ಕಲ್ಪಗಳ ಕಾಲ ಕಳೆದರೂ ಮತ್ತು ಮೂರೂ ಲೋಕಗಳನ್ನು ಭ್ರಾಂತಿಪಡಿಸಲು ಸಮರ್ಥವಾದ ಉತ್ಪಾತವು ಒದಗಿದರೂ ಸಿದ್ಧರ ಸ್ಥಿತಿಯಲ್ಲಿ ಹೆಚ್ಚು ಕಡಿಮೆಯಾಗುವುದಿಲ್ಲ.

ನಿಃಶ್ರೇಯಸಮಧಿಪನ್ನಾ-
ಸ್ತ್ರೈಲೋಕ್ಯಶಿಖಾಮಣಿಶ್ರಿಯಂ ದಧತೇ ॥
ನಿಃಕೀಟಕಾಲಿಕಾಛವಿ-
ಚಾಮೀಕರಭಾಸುರಾತ್ಮಾನಃ ॥ ೧೩೪ ॥

ತಾತ್ಪರ್ಯ—ಕಿಟ್ಟದಿಂದ ಮತ್ತು ಕಪ್ಪು ಬಣ್ಣದಿಂದ ಬಿಡಲ್ಪಟ್ಟ ಚಿನ್ನದಂತೆ ಉಜ್ವಲವಾದ ಕಾಂತಿಯುಳ್ಳ ಸಿದ್ಧರು (ಮೋಕ್ಷವನ್ನು ಪಡೆದವರು) ಮೂರೂ ಲೋಕದ ಮೇಲ್ಭಾಗದಲ್ಲಿ ಚೂಡಾಮಣಿಯ ಶೋಭೆಯನ್ನು ಧರಿಸುತ್ತಾರೆ.

ಪೂಜಾರ್ಥಾಜ್ಞೈಶ್ವರ್ಯೈ
ರ್ಬಲಪರಿಜನಕಾಮ ಭೋಗಭೂಯಿಷ್ಠೈಃ ॥
ಅತಿಶಯಿತಭುವನಮದ್ಭುತ-
ಮಭ್ಯುದಯಂ ಫಲತಿ ಸದ್ಧರ್ಮಃ ॥ ೧೩೫ ॥

ತಾತ್ಪರ್ಯ—ಈ ಸಲ್ಲೇಖನಾ ಧರ್ಮದಿಂದ ಪೂಜೆ, ಅರ್ಥ, ಆಜ್ಞಾ, ಐಶ್ವರ್ಯ, ಸಾಮರ್ಥ್ಯ, ಪರಿಜನ, ಕಾಮಭೋಗ, ಇವು ವಿಪುಲವಾಗಿರುವ ಅದ್ಭುತವಾದ ಮತ್ತೂ ಉತ್ಕೃಷ್ಟವಾದ ಇಂದ್ರಾದಿ ವೈಭವವು ಪ್ರಾಪ್ತವಾಗುತ್ತದೆ.

॥ ಇತಿ ಶ್ರೀ ಸಮಂತಭದ್ರಸ್ವಾಮಿ ವಿರಚಿತೇ ರತ್ನಕರಂಡ ನಾಮ್ನಿ ಉಪಾಸಕಾಧ್ಯಯನೇ ಸಲ್ಲೇಖನಾ ವರ್ಣನಂ ನಾಮ ಷಷ್ಠ ಪರಿಚ್ಛೇದಃ ॥

ತಾತ್ಪರ್ಯ—ಈ ಪ್ರಕಾರ ಶ್ರೀ ಸಮಂತಭದ್ರಸ್ವಾಮಿಯವರಿಂದ ರಚಿಸಲ್ಪಟ್ಟ ರತ್ನಕರಂಡಶ್ರಾವಕಾಚಾರದೊಳಗಿನ ಸಲ್ಲೇಖನಾವರ್ಣನವೆಂಬ ಆರನೇ ಪರಿಚ್ಛೇದವು ಸಮಾಪ್ತವು.

ಶ್ರಾವಕಪದಾನಿ ದೇವೈ-
ರೇಕಾದಶ ದೇಶಿತಾನಿ ಯೇಷು ಖಲು ॥
ಸ್ವಗುಣಾಃ ಪೂರ್ವಗುಣೈಃ ಸಹ
ಸಂತಿಷ್ಠಂತೇ ಕ್ರಮವಿವೃದ್ಧಾಃ ॥ ೧೩೬ ॥

ತಾತ್ಪರ್ಯ—ಶ್ರಾವಕರ ನೆಲೆಗಳು (ಪ್ರತಿಮೆಗಳು) ಸರ್ವಜ್ಞರಿಂದ ಹನ್ನೊಂದು ಹೇಳಲಾಗಿದೆ. ಅವುಗಳಲ್ಲಿ ಆ ಆ ಪ್ರತಿಮೆಯಲ್ಲಿರುವ ಗುಣಗಳು ಅವುಗಳ ಪೂರ್ವ ಪ್ರತಿಮೆಗಳಲ್ಲಿರುವ ಗುಣಗಳಿಂದ ಕೂಡಿ ಕ್ರಮದಿಂದ ವೃದ್ಧಿಯನ್ನು ಹೊಂದುತ್ತವೆ.

ಸಮ್ಯಗ್ದರ್ಶನಶುದ್ಧಃ
ಸಂಸಾರಶರೀರಭೋಗನಿರ್ವಿಣ್ಣಃ
ಪಂಚಗುರುಚರಣಶರಣೋ
ದರ್ಶನಿಕಸ್ತತ್ತ್ವಪಥಗೃಹ್ಯಃ ॥ ೧೩೭ ॥

ತಾತ್ಪರ್ಯ—ಸಮ್ಯಗ್ದರ್ಶನದಿಂದ ಶುದ್ಧನಾದವನು, ಸಂಸಾರ, ಶರೀರ ಮತ್ತು ಭೋಗ ಇವುಗಳಲ್ಲಿ ಪ್ರೀತಿಯಿಲ್ಲದಂಥವನು ಪಂಚಪರಮೇಷ್ಠಿಗಳ

ಪದಗಳೇ ಶರಣಾದಂಥವನು ಮತ್ತು ವ್ರತಗಳ ಮಾರ್ಗವನ್ನು ಗ್ರಹಿಸಲಿಚ್ಛಿಸು ವವನು ದರ್ಶನಿಕನು.

ನಿರತಿಕ್ರಮಣಮಣುವ್ರತ-
ಪಂಚಕಮಪಿ ಶೀಲಸಪ್ತಕಂ ಚಾಪಿ ॥
ಧಾರಯತೇ ನಿಃಶಲ್ಯೋ
ಯೋಽಸೌ ವ್ರತಿನಾಂ ಮತೋ ವ್ರತಿಕಃ॥ ೧೩೮ ॥

ತಾತ್ಪರ್ಯ—ಅತಿಚಾರವಿಲ್ಲದೆ ಪಂಚ ಅಣುವ್ರತಗಳನ್ನು, ಶೀಲ ಸಪ್ತಕಗಳನ್ನು, (ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತ ಇವುಗಳನ್ನು), ಧರಿಸಿ, ಮಾಯಾಶಲ್ಯ, ಮಿಥ್ಯಾತ್ವಶಲ್ಯ ಮತ್ತು ನಿದಾನಶಲ್ಯ ಎಂಬ ಮೂರು ಶಲ್ಯಗಳನ್ನು ಬಿಟ್ಟಾತನು ವ್ರತಿಕನು ಎಂದು ವ್ರತಿಗಳು (ಮುನಿಗಳು) ತಿಳಿಯುತ್ತಾರೆ.

ಚತುರಾವರ್ತತ್ರಿತಯ-
ಶ್ಚತುಃ ಪ್ರಣಾಮುಸ್ಥಿತೋ ಯಥಾಜಾತಃ ॥
ಸಾಮಯಿಕೋ ದ್ವಿನಿಷದ್ಯ-
ಸ್ತ್ರಿಯೋಗಶುದ್ಧಸ್ತ್ರಿಸಂಧ್ಯಮಭಿವಂದೀ ॥೧೩೯॥

ತಾತ್ಪರ್ಯ—ಮುಂಜಾನೆ, ಮಧ್ಯಾಹ್ನ ಮತ್ತು ಸಾಯಂಕಾಲದಲ್ಲಿ ವಚನ-ಕಾಯ ಎಂಬ ತ್ರಿಕರಣ ಶುದ್ಧಿಯಿಂದ ಬಾಹ್ಯಾಭ್ಯಂತರ ಪರಿಗ್ರಹ ವನ್ನು ಬಿಟ್ಟು, ಎರಡೂ ಕೈಗಳನ್ನು ಜೋಡಿಸಿ, ಮೂರು ಸಾರಿ ನಾಲ್ಕು ದಿಕ್ಕು ಗಳಲ್ಲಿ ನಾಲ್ಕು ನಾಲ್ಕು ಸಾರಿ ನಮಸ್ಕಾರ ಮಾಡುವುದು, ಮೂರನೇ ಸಾಮ ಯಿಕ ಪ್ರತಿಮೆಯೆನಿಸುತ್ತದೆ.

ಪರ್ವದಿನೇಷು ಚತುರ್ಷ್ವಪಿ
ಮಾಸೇಮಾಸೇ ಸ್ವಶಕ್ತಿಮನಿಗುಹ್ಯ ॥
ಪ್ರೋಷಧನಿಯಮವಿಧಾಯೀ
ಪ್ರಣಧಿಪರಃ ಪ್ರೋಷಧಾನಶನಃ ॥ ೧೪೦ ॥

ತಾತ್ಪರ್ಯ—ಅಷ್ಟಮಿ ಚತುರ್ದಶೀ ಎಂಬ ಪ್ರತಿಯೊಂದು ತಿಂಗಳ ಪರ್ವತಿಥಿಗಳಲ್ಲಿ ತನ್ನ ಶಕ್ತಿಯನ್ನು ಅಡಗಿಸದೆ ನಿಯಮದಿಂದ ಪ್ರೋಷಧೋಪವಾಸವನ್ನು ಮಾಡಿ, ಶುಭಧ್ಯಾನದಲ್ಲಿ ತತ್ಪರನಾಗಿರುವವನು, ನಾಲ್ಕನೇ ಪ್ರೋಷಧೋಪವಾಸ ಪ್ರತಿಮಾಧಾರಿಯು ಅನಿಸುತ್ತಾನೆ.

ಮೂಲಫಲಶಾಕಶಾಖಾ
ಕರೀರಕಂಪಪ್ರಸೂನಬೀಜಾನಿ ॥
ನಾಮಾನಿ ಯೋತ್ತಿ ಸೋಯಂ
ಸಚಿತ್ತವಿರತೋ ದಯಾಮೂರ್ತಿಃ ॥ ೧೪೧ ॥

ತಾತ್ಪರ್ಯ—ಹಸೀಬೇರು, ಹಣ್ಣು, ಪಲ್ಯ, ಕೊಂಬು, ಕಬ್ಬು ಅಥವಾ ಬಿದಿರು ಇವುಗಳ ಗಂಟು, ಗಡ್ಡೆ, ಹೂವು ಮತ್ತು ಬೀಜ ಇವುಗಳನ್ನು ಪ್ರಾಣಿಗಳಲ್ಲಿ ದಯೆಯುಳ್ಳ ಯಾವಾತನು ಸೇವಿಸುವುದಿಲ್ಲವೋ ಅವನು ಸಚಿತ್ತವಿರತನೆಂಬ ಐದನೇ ನೆಲೆಯವನು.

ಅನ್ನಂ ಪಾನಂ ಖಾದ್ಯಂ
ಲೇಹ್ಯಂ ನಾಶ್ನಾತಿ ಯೋ ವಿಭಾವರ್ಯಾಂ ॥
ಸಚ ರಾತ್ರಿಭುಕ್ತಿವಿರತಃ
ಸತ್ತ್ವೇಷ್ವನುಕಂಪಮಾನಮನಾಃ ॥ ೧೪೨ ॥

ತಾತ್ಪರ್ಯ—ಪ್ರಾಣಿ ಮಾತ್ರಗಳಲ್ಲಿ ದಯೆಯುಳ್ಳ ಯಾವ ಪುರುಷನು ರಾತ್ರಿಯಲ್ಲಿ ಅನ್ನ, ಪಾನ, ಖಾದ್ಯ ಮತ್ತು ಲೇಹ್ಯ ಎಂಬ ನಾಲ್ಕು ಪ್ರಕಾರದ ಆಹಾರವನ್ನು ಸೇವಿಸುವುದಿಲ್ಲವೋ ಅವನು ರಾತ್ರಿ ಭುಕ್ತಿತ್ಯಾಗವೆಂಬ ಆರನೇ ಪ್ರತಿಮಾಧಾರಿಯಾದ ಶ್ರಾವಕನು.

ಮಲಬೀಜಂ ಮಲಯೋನಿಂ
ಗಲನ್ಮಲಂ ಪೂತಿಗಂಧಿಬೀಭತ್ಸಂ ॥
ಪಶ್ಯನ್ನಂಗಮನಂಗಾ-
ದ್ವಿರಮತಿ ಯೋ ಬ್ರಹ್ಮಚಾರೀ ಸಃ ॥ ೧೪೩ ॥

ತಾತ್ಪರ್ಯ— ಶುಕ್ರಶೋಣಿತದಿಂದ ಉತ್ಪನ್ನವಾದ, ಅಪವಿತ್ರ ಸ್ವರೂಪವುಳ್ಳ ಮೂತ್ರಾದಿಮಲವನ್ನು ಸುರಿಸುವ ಮತ್ತು ಹೇಸಿಗೆಯನ್ನುಂಟು ಮಾಡುವಂಥ ಶರೀರದ ಅವಸ್ಥೆಯನ್ನು ಕಂಡು ಕಾಮಚೇಷ್ಟೆಯಿಂದ ವಿರಕ್ತ ನಾದವನು ಬ್ರಹ್ಮಚಾರಿಯೆಂಬ ಪ್ರತಿಮೆಯನ್ನು ಧರಿಸುತ್ತಾನೆ.

ಸೇವಾಕೃಷಿವಾಣಿಜ್ಯ-
ಪ್ರಮುಖಾದಾರಂಭತೋ ವ್ಯುಪಾರಮತಿ ॥
ಪ್ರಾಣಾತಿಪಾತಹೇತೋ-
ರ್ಯೋಽಸಾವಾರಂಭವಿನಿವೃತ್ತಃ ॥ ೧೪೪ ॥

ತಾತ್ಪರ್ಯ—ಹಿಂಸೆಗೆ ಕಾರಣವಾದ ಕೃಷಿಕರ್ಮ, ವ್ಯಾಪಾರ, ಸೇವಾ ವೃತ್ತಿ ಮೊದಲಾದ, ಸಂಸಾರವನ್ನು ಬೆಳೆಸುವಂತಹ ಆರಂಭದ ಕೆಲಸಗಳನ್ನು ಬಿಡುವವನು ಅರಂಭನಿವೃತ್ತನೆಂಬ ಎಂಟನೇ ನೆಲೆಯ ಶ್ರಾವಕನು;

ಬಾಹ್ಯೇಷು ದಶಸು ವಸ್ತುಷು
ಮಮತ್ವಮುತ್ಸೃಜ್ಯ ನಿರ್ಮಮತ್ವರತಃ ॥
ಸ್ವಸ್ಥಃ ಸಂತೋಷಪರಃ
ಪರಿಚಿತ್ತ ಪರಿಗ್ರಹಾದ್ವಿರತಃ ॥ ೧೪೫ ॥

ತಾತ್ಪರ್ಯ—ಹತ್ತು ಪ್ರಕಾರದ ಬಾಹ್ಯಪರಿಗ್ರಹದಮೇಲಿನ ಮಮತ್ವವನ್ನು ಬಿಟ್ಟು, ಸಮತಾಭಾವವುಳ್ಳವನಾಗಿ ಮತ್ತು ಆತ್ಮಸ್ವರೂಪದಲ್ಲಿ ಲೀಲನಾಗಿದ್ದು ಸಂತೋಷದಲ್ಲಿರುವವನು ಪರಿಗ್ರಹನಿವೃತ್ತನೆಂಬ ಒಂಬತ್ತನೇ ನೆಲೆಯ ಶ್ರಾವಕನು.

ಅನುಮತಿರಾರಂಭೇ ವಾ
ಪರಿಗ್ರಹೇ ವೈಹಿಕೇಷು ಕರ್ಮಸು ವಾ ॥
ನಾಸ್ತಿ ಖಲು ಯಸ್ಯ ಸಮಧೀ-
ರನುಮತಿ ವಿರತಃ ಸ ಮಂತ್ಯವ್ಯಃ ॥ ೧೪೬ ॥

ತಾತ್ಪರ್ಯ—ಆರಂಭ (ಕೃಷಿಕರ್ಮ ವ್ಯಾಪಾರ ಮುಂತಾದುವುಗಳು) ಪರಿಗ್ರಹ (ಧನಧಾನ್ಯ ದಾಸದಾಸೀ ಮೊದಲಾದವುಗಳು). ಐಹಿಕ (ಲಗ್ನಕಾರ್ಯಾದಿಗಳು) ಇವುಗಳಲ್ಲಿ ಯಾವಾತನ ಒಡಂಬಡಿಕೆಯಿಲ್ಲವೋ, ಆ ಸಮಬುದ್ಧಿಯುಳ್ಳವನು ಅನುಮತಿವಿರತನೆಂಬ ಹತ್ತನೇ ನೆಲೆಯುವನು.

ಗೃಹತೋ ಮುನಿವನಮಿತ್ವಾ
ಗುರೂಪಕಂಠೇ ವ್ರತಾನಿ ಪರಿಗೃಹ್ಯ ॥
ಭೈಕ್ಷ್ಯಾಶನಸ್ತಪಸ್ಯ-
ನ್ನುತ್ಕೃಷ್ಟಶ್ಚೇಲಖಂಡಧರಃ ॥ ೧೪೭ ॥

ತಾತ್ಪರ್ಯ—ಮನೆಯಿಂದ ಹೊರಟು ಮುನಿಗಳಿಗಿರುವ ಅರಣ್ಯಕ್ಕೆ ಹೋಗಿ ಗುರುಗಳಿಂದ ವ್ರತಗಳನ್ನು ತೆಗೆದುಕೊಂಡು ತಪಸ್ಸು ಮಾಡುತ್ತ, ಭಿಕ್ಷೆಗೆ ತಿರುಗಿ ಆಹಾರವನ್ನು ತೆಗೆದುಕೊಳ್ಳುವಂಥ ಮತ್ತು ವಸ್ತ್ರದ ಖಂಡ ವನ್ನು (ಅಪೂರ್ಣ ಬಟ್ಟೆಯನ್ನು) ಮಾತ್ರ ಧರಿಸುವವನು ಹನ್ನೊಂದನೇ ನೆಲೆಯ ಉತ್ಕೃಷ್ಟ ಶ್ರಾವಕನೆನಿಸುತ್ತಾನೆ.

ಪಾಪಮರಾತಿರ್ಧರ್ಮೋ
ಬಂಧುರ್ಜೀವಸ್ಯ ಚೇತಿ ನಿಶ್ಚಿನ್ವನ್ ॥
ಸಮಯಂ ಯದಿ ಜಾನೀತೇ
ಶ್ರೇಯೋ ಜ್ಞಾತಾ ಧ್ರುವಂ ಭವತಿ ॥ ೧೪೮ ॥

ತಾತ್ಪರ್ಯ—ಪಾಪವು ಪ್ರಾಣಿಗಳಿಗೆ ವೈರಿಯು; ಧರ್ಮವು ಬಂಧುವು ಎಂದು ನಿಶ್ಚಯಿಸಿ ಆಗಮನವನ್ನು ತಿಳಿದುಕೊಳ್ಳುವವನು ಸಂದೇಹವಿಲ್ಲದೆ ಕಲ್ಯಾಣವನ್ನು ತಿಳಿಯುವಂಥ ಜ್ಞಾನಿ ಆಗುತ್ತಾನೆ.

ಯೇನ ಸ್ವಯಂ ವೀತಕಲಂಕವಿದ್ಯಾ-
ದೃಷ್ಟಿಕ್ರಿಯಾರತ್ನಕರಂಡಭಾವಂ ॥
ನೀತಸ್ತಮಾಯಾತಿ ಪತೀಚ್ಛಯೇವ
ಸರ್ವಾರ್ಥಸಿದ್ಧಿಸ್ತ್ರಿಷು ವಿಷ್ಟಪೇಷು ॥ ೧೪೯ ॥

ತಾತ್ಪರ್ಯ—ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ, ಸಮ್ಯಕ್‌ಚಾರಿತ್ರ ಎಂಬ ರತ್ನತ್ರಯಗಳನ್ನು ನಿರ್ಮಲಮಾಡಿ ತನ್ನನ್ನು ಅವುಗಳಿಗೆ ಕರಡಿಗೆಯಂತೆ ಮಾಡಿಕೊಂಡವನಿಗೆ ತ್ರೈಲೋಕ್ಯದೊಳಗಿನ ಎಲ್ಲ ಪುರುಷಾರ್ಥಗಳ ಸಿದ್ಧಿಯು ಪತಿಯ ಅಪೇಕ್ಷೆಯಿಂದ ಪ್ರಾಪ್ತವಾಗುತ್ತದೆ.

ಸುಖಯತು ಸುಖಭುಮಿಃ ಕಾಮಿನಂ
ಕಾಮಿನೀವ
ಸುತಮಿವ ಜನನೀ ಮಾಂ ಶುದ್ಧಶೀಲಾ
ಭುನಕ್ತು ||
ಕುಲಮಿವ ಗುಣಭೂಷಾ ಕನ್ಯಕಾ ಸಂಪುನೀತ್
ಜಿನಪತಿಪದಪದ್ಮಪ್ರೇಕ್ಷಿಣೀ ದೃಷ್ಟಿ
ಲಕ್ಷ್ಮೀಃ || ೧೫೦ ||

ತಾತ್ಪರ್ಯ—ಕಾಮುವಶನಾದ ಪುರುಷನಿಗೆ ಕಾಮಿನಿಯು ಸುಖವನ್ನೀಯುವಂತೆ ಶ್ರೀ ಜಿನೇಶ್ವರನ ವಚನಕಮಲದಲ್ಲಿಟ್ಟ ನಂಬಿಗೆಯೆಂಬ ಸಮ್ಯಕ್‌ದರ್ಶನ ಲಕ್ಷಿಯು ನನಗೆ ಸುಖವನ್ನುಂಟುಮಾಡಲಿ; ಶುದ್ಧಸ್ವಭಾವದ ತಾಯಿಯು ತನ್ನ ಪುತ್ರನನ್ನು ಪಾಲಿಸುವಂತೆ ಸಮ್ಯಗ್ದರ್ಶನ ಲಕ್ಷ್ಮಿಯು ನನ್ನನ್ನು ರಕ್ಷಿಸಲಿ; ಗುಣವತಿಯಾದ ಕನ್ನಿಕೆಯು ಕುಲವನ್ನು ಪವಿತ್ರಮಾಡುವಂತೆ ಸಮ್ಯಗ್ದರ್ಶನವೆಂಬ ಶ್ರದ್ಧೆಯು ನನ್ನನ್ನು ಪವಿತ್ರಮಾಡಲಿ.

||ಇತಿ ಶ್ರೀ ಸಮಂತಭದ್ರಸ್ವಾಮಿ ವಿರಚಿತೇ ರತ್ನಕರಂಡನಾಮ್ನಿ ಉಪಾಸಕಾಧ್ಯಯನೇ ಏಕಾದಶಪ್ರತಿಮಾವರ್ಣನಂ ನಾಮ ಸಪ್ತಮ ಪರಿಚ್ಛೇದಃ ||

ತಾತ್ಪರ್ಯ—ಈ ಪ್ರಕಾರ ಶ್ರೀಸಮಂತಭದ್ರಸ್ವಾಮಿಯವರು ರಚಿಸಿದ ರತ್ನಕರಂಡಶ್ರಾವಕಾಚಾರದೊಳಗಿನ ಹನ್ನೊಂದನೆಯ ಪ್ರತಿಮಾವರ್ಣನವೆಂಬ ಏಳನೇ ಭಾಗವು ಮುಗಿಯಿತು.

ಸಮಾಪ್ತಂ

ಮಹಾವೀರ ಮಿಶನ್ನಿನ ಪ್ರಕಟಣೆಗಳು

ಪ್ರಕಟಿತ ಗ್ರಂಥಗಳು

ಜೈನಧರ್ಮ ಪಠ್ಯ ಗ್ರಂಥಮಾಲೆ

ಪ್ರಥಮ ಪರೀಕ್ಷೆಯ ಪಠ್ಯ

ಜೈನಧರ್ಮ ಮೌಖಿಕ ಪಠ್ಯಪುಸ್ತಕ

ಲೇಖಕರು : **ರಾಮಚಂದ್ರ ಸ್ಯಾದ್ವಾದಿ**

ಪುಟ 16 1976 ಬೆಲೆ : 0–25

ಪ್ರಥಮ ಪರೀಕ್ಷೆಯ ಪಠ್ಯ

ಜೈನಧರ್ಮ ಬೋಧೆ (ಭಾಗ 1)

ಲೇಖಕರು : **ಡಿ. ಪದ್ಮನಾಭಶರ್ಮ**

(ಪ್ರಥಮ ಮುದ್ರಣ 1968)

ಪುಟ 80 (ದ್ವಿ. .ಮು. 1975) 1–00

ಮಾಧ್ಯಮ ಪರೀಕ್ಷೆಯ ಪಠ್ಯ

ಜೈನಧರ್ಮ ಬೋಧೆ (ಭಾಗ 2)

ಲೇಖಕರು : **ಡಿ. ಪದ್ಮನಾಭಶರ್ಮ**

ಪುಟ 80 1973 ಬೆಲೆ : 0–50

ವಿಶಾರದ ಪ್ರಥಮ ಪಠ್ಯ

ರತ್ನಕರಂಡಶ್ರಾವಕಾಚಾರ

ಸಂ : ಜಿ. ಅಶ್ವತ್ಥನಾರಾಯಣ ಮತ್ತು ಕಾ. ಪ. ವೃಷಭರಾಜು

ಪುಟ 80 1676 ಬೆಲೆ : 75

ಪ್ರತಿಗಳಿಗೆ :

ಮಹಾವೀರ ಮಿಶನ್. ಬೆಂಗಳೂರು - ೪

ಶ್ರೀ ಮಹಾವೀರ ಮಿಶನ್ನಿನ ಧ್ಯೇಯಗಳು

(ಅ) ಜೈನಸಮ್ಮೇಳನ, ಸಾಹಿತ್ಯೋತ್ಸವ ಮುಂತಾದ ಉತ್ಸವಗಳು, ಉಪನ್ಯಾಸಗಳನ್ನು ಏರ್ಪಡಿಸುವುದು.

(ಆ) ಶ್ರುತಭಂಡಾರಗಳ, ವಾಚನಾಲಯಗಳ, ಧಾರ್ಮಿಕಪಾಠಶಾಲೆಗಳ ಸ್ಥಾಪನೆ. ಅವುಗಳಿಗೆ ಪ್ರೋತ್ಸಾಹ ನೀಡುವುದು.

(ಇ) ಜೈನಧರ್ಮದರ್ಶನ, ತತ್ವವಿಚಾರ, ಪ್ರಾಚೀನಸಾಹಿತ್ಯ ಚರಿತ್ರೆ ಇತ್ಯಾದಿಗಳ ಪ್ರಕಟಣೆ, ಪ್ರಕಟಣೆಗೆ ಸಹಾಯ ನೀಡುವುದು.

(ಈ) ಹೊಸಕಾಲಕ್ಕೆ ತಕ್ಕಂತೆ ಧರ್ಮ, ದರ್ಶನ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಗ್ರಂಥಗಳನ್ನು ಬರೆಸುವುದು, ಪ್ರಕಟಿಸುವುದು, ಪ್ರಕಟಿಸಲು ಸಹಾಯಮಾಡುವುದು.

(ಉ) ಜೈನಪುಣ್ಯಕ್ಷೇತ್ರಗಳೂ, ದೇವಾಲಯಗಳೂ, ಹೆಚ್ಚು ಜನಾಕರ್ಷಣೀಯವಾಗುವಂತೆ ಮಾಡುವುದು.

(ಊ) ಜೈನಪುರೋಹಿತವರ್ಗ ನಶಿಸಿಹೋಗದಂತೆ ನೋಡಿಕೊಳ್ಳುವುದು.

(ಋ) ಜೈನ ಹಾಸ್ಟಲುಗಳು ಸುವ್ಯವಸ್ಥಿತವಾಗಿ ನಡೆಯುವಂತೆ ಏರ್ಪಾಟು ಮಾಡುವುದು.

(ೠ) ಜೈನ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವುದು ಮತ್ತು ಕೊಡಿಸುವುದು

ವಿ. ಸೂ : ಮಹಾವೀರ ಮಿಶನ್ನಿನ ನಾನಾ ಉದ್ದೇಶಗಳನ್ನು ಕೈಗೂಡಿಸಲು ತಾವೆಲ್ಲರೂ ಈ ಸಂಸ್ಥೆಗೆ ಸದಸ್ಯರಾಗಿ ಸಹಕರಿಸುವಿರಾಗಿ ಆಶಿಸುತ್ತೇವೆ.